ದೆಹಲಿ ಕರ್ನಾಟಕ ಸಂಘದ

# ಅಭಿಮತ

ಡಿಸೆಂಬರ್ 2011 ಬೆಲೆ ರೂ. 1.





## ಸಂಭ್ರಮದ ರಾಜ್ಯೋತ್ಸವ








‘ಸರಸ್ವತಿ ಸಮ್ಮಾನ್’ ಪ್ರಶಸ್ತಿ ಸ್ವೀಕರಿಸಿದ ಕನ್ನಡದ ಖ್ಯಾತ ಲೇಖಕ ಶ್ರೀ ಎಸ್.ಎಲ್. ಭೈರಪ್ಪನವರು ಸಮಯದ ಅಭಾವದಿಂದಾಗಿ ಸಂಘಕ್ಕೆ ಬರಲು ಸಾಧ್ಯವಾಗಲಿಲ್ಲ. ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಅವರನ್ನು ಭೇಟಿಯಾಗಿ ಅಭಿನಂದಿಸಿದರು.



## ಕಿರು ಸಂದರ್ಶನ

ಅಭಿಮತ : ತಾವು ಸಾಕಷ್ಟು ಕಾಲ ದೆಹಲಿ, ಗುಜರಾತ್ ಮುಂತಾದೆಡೆ ಇದ್ರಿ. ಹೊರನಾಡ ಕನ್ನಡಿಗರಿಗಾಗಿ ನಿಮ್ಮ ಅನುಭವ ಏನು?

ಭೈರಪ್ಪ : ಲೇಖಕನಾಗಿ ನನ್ನ ಕನ್ನಡ ಬರವಣಿಗೆ ಇದ್ದಿದ್ದರಿಂದ ನನಗೇನೂ ಅಷ್ಟು ಕೊರತೆ ಕಂಡು ಬರಲಿಲ್ಲ. ಆದರೆ ಕನ್ನಡತನದ ಕೊರತೆ ಬಹಳ ಕಾಡಿಸ್ತಾ ಇತ್ತು. 1967 ರಿಂದ 71 ರವರೆಗೆ ನಾನು ದೆಹಲಿಯ ಗ್ರೀನ್ ಪಾರ್ಕ್‌ನಲ್ಲಿ ವಾಸವಾಗಿದ್ದೆ. NCERT ಯಲ್ಲಿ ನೌಕರಿ ಮಾಡ್ತಾ ಇದ್ದೆ. ನಿಜವಾದ ಲೇಖಕ ಜನ ಸಾಮಾನ್ಯರ ಜೊತೆ ಬೆರೆತಾಗಲೇ ಭಾಷೆ ಸತ್ವಯುತವಾಗೋದು. ನನಗೆ ಮಧ್ಯಮವರ್ಗದ ಜನರ ಒಡನಾಟ ಹೊರನಾಡಿನಲ್ಲಿ ಅಷ್ಟಾಗಿ ಸಿಗಲಿಲ್ಲ. ಹಾಗಾಗಿ ನಾನೇ ಇಲ್ಲಿಂದ ವರ್ಗಾವಣೆ ಮಾಡಿಸ್ಕೊಂಡು ಕರ್ನಾಟಕಕ್ಕೆ ವಾಪಸ್ಸಾದೆ. ನಾನು ಇಲ್ಲಿದ್ದಾಗಲೇ ನಾಯಿ ನೆರಳು, ಜಲಪಾತ, ಗೃಹಭಂಗ, ತಬ್ಬಲಿಯು ನೀನಾದೆ ಮಗನೇ ಮೊದಲಾದ ಕಾದಂಬರಿಗಳನ್ನು ಬರೆದೆ. ಹಾಗಾಗಿ ನನಗೆ ದೆಹಲಿ ಅಪರಿಚಿತವೇನಲ್ಲ.

ಅಭಿಮತ : ಉತ್ತರ ಹಾಗೂ ದಕ್ಷಿಣ ಭಾರತದ ನಡುವೆ ಬಹಳ ವ್ಯತ್ಯಾಸ ಇದೆ ಅಂತ ಅನ್ನಿಸುತ್ತಾ?

ಭೈರಪ್ಪ : ಭಾಷೆ, ಆಹಾರ, ಉಡುಗೆ–ತೊಡುಗೆಗಳಲ್ಲಿ ವ್ಯತ್ಯಾಸವಿರಬಹುದು. ನಮ್ಮ ಸಾರು–ಇಲ್ಲಿಯ ದಾಲ್‌ಗೆ ವ್ಯತ್ಯಾಸವಿದೆ, ಅಷ್ಟೇ. ಆದರೆ ಸಂಸ್ಕೃತಿಯಲ್ಲಿ ಬಹಳಷ್ಟು ಸಾಮ್ಯವಿದೆ. ಉತ್ತರ ಮತ್ತು ದಕ್ಷಿಣಕ್ಕೂ ಉತ್ತಮವಾದ ಸಾಮರಸ್ಯವಿದೆ. ನಾವು ನಮ್ಮ ನಾಡಿನಿಂದ ಹೊರಗೆ ಹೋದಾಗ ಮಾತ್ರ ಇದರ ಅರಿವಾಗುತ್ತದೆ. ನಮ್ಮ ಭಾಷೆಯ ಮಹತ್ವ ಹೊರಗಿದ್ದಾಗಲೇ ನಿಜವಾಗಿ ಅರ್ಥವಾಗೋದು. ನಮ್ಮಲ್ಲಿ ಭಾರತೀಯತ್ವ ಖಂಡಿತಾ ಉಳಿದುಕೊಂಡಿದೆ ಅನ್ನೋ ಸತ್ಯ ಹೊರದೇಶಕ್ಕೆ ಹೋದಾಗ ಅರ್ಥವಾಗುತ್ತೆ. ನಾನು ದೆಹಲಿಯಲ್ಲಿದ್ದಾಗ ಮಾರ್ಕೆಟ್‌ನಲ್ಲಿ ಹೋಗ್ತಾ ಇರೋವಾಗ ಯಾರಾದ್ರೂ ಕನ್ನಡದಲ್ಲಿ ಮಾತಾಡೋದು ಕೇಳಿಸಿದ್ರೆ ಸಾಕು, ಅವರನ್ನು ನಿಲ್ಲಿಸಿ ಮಾತಾಡಿಸ್ತಿದ್ದೆ. ಆದರೆ, ಕೆಲವೊಮ್ಮೆ ನಮ್ಮ ಕನ್ನಡಿಗರು ನಿರುತ್ಸಾಹ ತೋರಿಸಿದ್ದೂ ಉಂಟು! ನನ್ನ ಹೆಂಡತಿಗೆ ಸಾಕಷ್ಟು ಕನ್ನಡಿಗರ ಪರಿಚಯವಾಗಿತ್ತು. ಆದರೂ ಆಗ ಇಷ್ಟು ಸಂಖ್ಯೆಯಲ್ಲಿ ಕನ್ನಡಿಗರು ಇರಲಿಲ್ಲ ಅನ್ಸುತ್ತೆ.

ಅಭಿಮತ : ಹೊರನಾಡ ಕನ್ನಡಿಗರು ಕನ್ನಡವನ್ನು ಹೇಗೆ ಉಳಿಸಿಕೊಳ್ಳಬಹುದು?

ಭೈರಪ್ಪ : ಕೇವಲ ಹೊರನಾಡ ಕನ್ನಡಿಗರು ಮಾತ್ರವಲ್ಲ, ಅನಿವಾಸಿ ಕನ್ನಡಿಗರಿಗೂ ಈ ಸಮಸ್ಯೆ ಇದೆ. ಮೊದಲನೆಯದಾಗಿ ಮನೆಯಲ್ಲಿ ಮಕ್ಕಳ ಜೊತೆ ಕಡ್ಡಾಯವಾಗಿ ಕನ್ನಡದಲ್ಲಿ ಮಾತನಾಡಬೇಕು. ಯಾಕೇಂದ್ರೆ ಪರಿಸರದ ಯಾವುದೇ ಭಾಷೆಯನ್ನು ಮಕ್ಕಳು ಸುಲಭವಾಗಿ ಕಲಿಯುತ್ತಾರೆ. ಮಕ್ಕಳ ಮಿದುಳು ಕಂಪ್ಯೂಟರ್ ಇದ್ದಂತೆ. ಎಲ್ಲವನ್ನೂ ಗ್ರಹಿಸುವ ಶಕ್ತಿ ಮಕ್ಕಳಿಗಿದೆ. ಹೊರನಾಡಿನಲ್ಲಿ ಕನ್ನಡ ಶಾಲೆಗಳನ್ನು ನಡೆಸುವುದು ಕಷ್ಟ. ಆದರೆ, ಎಷ್ಟರಮಟ್ಟಿಗೆ ಸಾಧ್ಯವೋ ಆ ಪ್ರಯತ್ನವನ್ನು ಬಿಡಬಾರದು. ಮಕ್ಕಳನ್ನು ಹೆಚ್ಚೆಚ್ಚು ಕನ್ನಡ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಭಾವಗೀತೆ, ಹಾಡುಗಳು, ಕತೆ, ಪುಟ್ಟ ಪುಟ್ಟ ನಾಟಕ ಮೊದಲಾದ ಚಟುವಟಿಕೆಗಳ ಮೂಲಕ ಕನ್ನಡವನ್ನು ಜೀವಂತವಾಗಿಸುವ ಪ್ರಯತ್ನ ಮಾಡಬೇಕು. ಇದರ ಜೊತೆ ಕರ್ನಾಟಕದ ನಂಟನ್ನು ಮರೆಯಬಾರದು. ವರ್ಷಕ್ಕೊಮ್ಮೆ ಊರಿಗೆ ಕರ್‍ಕೊಂಡು ಹೋಗಿ ಎಲ್ಲರ ಜೊತೆ ಬೆರೆಯಬೇಕು. ಕರ್ನಾಟಕದ ಸಂಸ್ಕೃತಿಯನ್ನು ಕೇವಲ ಪಾಠಗಳ ಮೂಲಕ ಮಾತ್ರವಲ್ಲ, ಸ್ವತಃ ನೋಡಿ ಕಲಿಯುವಂತಾಗಬೇಕು. ಆಗಲೇ ನಮ್ಮ ಮಕ್ಕಳಿಗೆ ನಮ್ಮ ನಾಡು, ನುಡಿ, ಸಂಸ್ಕೃತಿಯ ಅರಿವು ಮೂಡಲು ಸಾಧ್ಯ. ಇಲ್ಲದಿದ್ರೆ ಮುಂದಿನ ತಲೆಮಾರಿಗೆ ಸಂಸ್ಕೃತಿ ಮುಟ್ಟುವುದೇ ಇಲ್ಲ. ನಾವೆಲ್ಲಿದ್ದರೂ ನಮ್ಮತನವನ್ನು ಮರೆಯಬಾರದು.

ಅಭಿಮತ : ಕರ್ನಾಟಕದಲ್ಲಿ ಕನ್ನಡ ಉಳಿಸಬೇಕಾಗಿದೆ ಎಂಬ ಕೂಗಿದೆ. ನೀವೇನಂತೀರಾ?

ಭೈರಪ್ಪ : ಈ ಮಾತು ನಿಜ. ಇವತ್ತು ಬೆಂಗಳೂರಿನಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಕನ್ನಡದಲ್ಲಿ ಮಾತಾಡೋದೇ ಅವಮಾನ ಅನ್ನುವ ಪ್ರವೃತ್ತಿ ಬೆಳೀತಾ ಇದೆ. ಅಂಥ ಭಾಷಾಭಿಮಾನದಿಂದ ಇತರೆ ಭಾಷೆಗಳನ್ನು ಅವಮಾನಿಸುವ ಅಗತ್ಯ ಖಂಡಿತಾ ಇಲ್ಲ. ಆದರೆ ನಮ್ಮ ಭಾಷೆಯ ಬಗ್ಗೆ ಅಭಿಮಾನವಿರಲೇಬೇಕು. ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲೇ ಕಡ್ಡಾಯವಾಗಬೇಕು. ಆದರೆ ಇದನ್ನು ನಾವು–ನೀವು ಮಾತ್ರ ಹೇಳಿದ್ರೆ ಸಾಲದು. ಸರ್ಕಾರ ಈ ಕ್ರಮವನ್ನು ತುರ್ತಾಗಿ ಜಾರಿ ಮಾಡಿದ್ರೆ ಮಾತ್ರ ಸಾಧ್ಯ. ಅಡ್ಡಗಾಲು ಹಾಕುವ ರಾಜಕಾರಣಿಗಳು ಪಕ್ಷಬೇಧ ಮರೆತು ಒಂದಾಗಿ ಇದನ್ನು ಕಾರ್ಯಗತಗೊಳಿಸಲಿ ಎಂಬುದೇ ನನ್ನ ಆಶಯ.

■ ಉಷಾ ಭರತಾದ್ರಿ



ನವೆಂಬರ್ 16, 2011ರಂದು ಕೆ.ಕೆ. ಬಿರ್ಲಾ ಫೌಂಡೇಶನ್ ಏರ್ಪಡಿಸಿದ ಸಮ್ಮೇಳನದಲ್ಲಿ “ಸರಸ್ವತಿ ಸಮ್ಮಾನ್–2011” ರ ಪ್ರಶಸ್ತಿಯಿಂದ ಪುರಸ್ಕೃತಗೊಂಡ ಕರ್ನಾಟಕದ ಖ್ಯಾತ ಸಾಹಿತಿ, ಲೇಖಕ ಪ್ರೊ. ಎಸ್.ಎಲ್. ಭೈರಪ್ಪ ಅವರನ್ನು ಸರ್ಕಾರದ ಅಪರ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಅವರು ಪುಷ್ಪಗುಚ್ಛ ನೀಡಿ ಅಭಿನಂದಿಸುತ್ತಿರುವುದು.


ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್



**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com




ಅಭಿಮತ
ಸಂಪುಟ 22 ಸಂಚಿಕೆ 3
ಡಿಸೆಂಬರ್ 2011, ಬೆಲೆ ರೂ. 1

## ಮನದ ಮಾತು

ನನಗಿನ್ನೂ ನೆನಪಿದೆ. 2000ದಿಂದ 2005ನೇ ಇಸವಿ ತನಕ ದಿಲ್ಲಿಯಿಂದ ನಮ್ಮ ಊರು ಬಹುದೂರ ಅನ್ನಿಸುತ್ತಿತ್ತು. ಎರಡು ರಾತ್ರಿ, ಎರಡು ಹಗಲು ಚುಕುಚುಕು ರೈಲಿನಲ್ಲಿ ಊರು ತಲುಪುವ ಹೊತ್ತಿಗೆ ಸಾಕುಸಾಕಾಗಿ ಹೋಗುತ್ತಿತ್ತು. ಅನಂತರದ ದಿನಗಳಲ್ಲಿ ಊರು ಹತ್ತಿರ ಅನ್ನಿಸತೊಡಗಿತು, ಕೇವಲ ಎರಡೂವರೆ ಗಂಟೆಯಲ್ಲಿ ನಮ್ಮೂರು ಮುಟ್ಟುವ ಸುವರ್ಣಾವಕಾಶ ಕೈಗೆಟಕುವಂತಾಯಿತು, ಇದಕ್ಕೆ ಕಾರಣ ನಮ್ಮ ಕರ್ನಾಟಕದವರೇ ಆದ ಕ್ಯಾಪ್ಟನ್ ಗೋಪಿನಾಥ್ ಕಡಿಮೆ ದರಗಳಲ್ಲಿ ಜನಸಾಮಾನ್ಯರೂ ವಿಮಾನದಲ್ಲಿ ಪ್ರಯಾಣಿಸಬಹುದು ಎಂದು ತಮ್ಮ ಡೆಕ್ಕನ್ ಏರ್‌ವೇಸ್ ಮೂಲಕ ಸಾಬೀತು ಪಡಿಸಿದ್ದು. ಕ್ರಮೇಣ ಏರ್‌ವೇಸ್‌ಗಳ ನಡುವೆ ಸ್ಪರ್ಧೆ ಏರ್ಪಟ್ಟು ನಮ್ಮಂತಹವರೆಲ್ಲ ರೈಲು ಪ್ರಯಾಣವನ್ನು ಮರೆಯುವಂತಹ ಸನ್ನಿವೇಶ ಏರ್ಪಟ್ಟಿತು. ಆದರೆ ಈ ಸುವರ್ಣಾವಕಾಶಕ್ಕೆ ಈಗ ಸಂಚಕಾರ ಬಂದಿದೆ. ಇಂಧನದ ದರ ಏರಿಕೆ, ಇತರೆ ಅಧಿಕ ವೆಚ್ಚ ಹಾಗೂ ಲೋಪಯುಕ್ತ ನಿರ್ವಹಣೆಗಳಿಂದ ಏರ್‌ಲೈನ್ಸ್‌ಗಳು ನಷ್ಟ ಅನುಭವಿಸುತ್ತಿವೆ–ಇಂಡಿಗೊ ಹೊರತಾಗಿ. ನಮ್ಮ ನಾಡಿನ ಮೂಲದ ಕಿಂಗ್‌ಫಿಷರ್ ಏರ್‌ಲೈನ್ಸ್ ಲಭ್ಯ ವರದಿಗಳ ಪ್ರಕಾರ ನೆಲ ಕಚ್ಚಿದೆ. ನಮ್ಮ ಸರ್ಕಾರ ಹಾಗೂ ಅರ್ಥ ವ್ಯವಸ್ಥೆಗೆ ನೆರವಾಗುವ ಸಂಸ್ಥೆಗಳು ಈ ವಾಣಿಜ್ಯೋದ್ಯಮವನ್ನು ರಕ್ಷಿಸಬೇಕಿದೆ. ಆಗ ದೇಶದ ಒಂದೆಡೆಯಿಂದ ಇನ್ನೊಂದೆಡೆಗೆ ನಿರ್ಭಿಡೆಯಿಂದ ಸಾಮಾನ್ಯರೂ ಪ್ರಯಾಣಿಸಬಹುದು. ಹೊಸ ಏವಿಯೇಶನ್ ನಿಯಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ತತ್‌ಕ್ಷಣ ಮುಂದಾಗಬೇಕಾಗಿದೆ. ಕೇವಲ ಶ್ರೀಮಂತರು ಹಾಗೂ ಉಚ್ಛ ಅಧಿಕಾರ ವರ್ಗಕ್ಕೆ ಮೀಸಲಿದ್ದ ವಿಮಾನಯಾನ ಎಲ್ಲ ವರ್ಗಗಳಿಗೂ ಎಟಕುವಂತೆ ಕ್ರಾಂತಿ ಮಾಡಿದ ಕರ್ನಾಟಕದ ಉದ್ಯಮಿಗಳು ಈ ಸಮಸ್ಯೆಯನ್ನು ಸಮರ್ಥವಾಗಿ ನಿರ್ವಹಿಸಬಲ್ಲರು ಎಂಬುದು ನಮ್ಮ ವಿಶ್ವಾಸ.

ಅಗತ್ಯ ವಸ್ತುಗಳ ದಾರಣೆ ದಿನದಿಂದ ದಿನಕ್ಕೆ ಏರುತ್ತಿರುವುದು ನಿಜಕ್ಕೂ ಆತಂಕ ತರುವಂತಹ ಸಂಗತಿ. ಬಹುತೇಕ ಜನ ತಮ್ಮ ಗಳಿಕೆಯ ಅರ್ಧಕ್ಕೂ ಹೆಚ್ಚು ಭಾಗವನ್ನು ಕೇವಲ ಆಹಾರ ಪದಾರ್ಥಗಳಿಗೆ ಖರ್ಚು ಮಾಡಬೇಕಾಗಿದೆ. ಆಹಾರ ಪದಾರ್ಥಗಳ ವಿಪರೀತ ದಾರಣೆ ಉಳ್ಳವರು ಹಾಗೂ ಬಡವರ ನಡುವಣ ಕಂದಕವನ್ನು ಮತ್ತಷ್ಟು ಹಿಗ್ಗಿಸುತ್ತಿದೆ ಹಾಗೂ ಅನಿವಾರ್ಯವಾಗಿ ಇದು GDP (Gross Domestic Product) ಯ ವೃದ್ಧಿಯನ್ನು ಕುಂಠಿತಗೊಳಿಸುತ್ತದೆ ಎಂಬುದು ಮಾತ್ರ ಕಠೋರ ವಾಸ್ತವ. ಭ್ರಷ್ಟಾಚಾರ, ದಾರಣೆ ಹೆಚ್ಚಳಗಳ ಕಾರಣಗಳಿಂದ ಭಾರತ ಸಂಕಷ್ಟಕ್ಕೆ ಒಳಗಾಗುತ್ತದೆ ಹಾಗೂ ಜಗತ್ತಿನ ಅತ್ಯಂತ ವೇಗವಾಗಿ ವರ್ಧಿಸುತ್ತಿರುವ ಅರ್ಥವ್ಯವಸ್ಥೆಯ ನೆಲೆ ಎಂಬ ಖ್ಯಾತಿಗೆ ಧಕ್ಕೆ ಬರುತ್ತದೆ–ಎಂಬುದು ಅರ್ಥ ತಜ್ಞರ ಅಭಿಪ್ರಾಯ. ಅಲ್ಲದೆ ಸರ್ಕಾರ ನೀಡುತ್ತಿರುವ ಸಬ್ಸಿಡಿಗಳು ಈ ಭ್ರಷ್ಟ ವ್ಯವಸ್ಥೆಯಲ್ಲಿ ತಲುಪುವವರನ್ನು ಸರಿಯಾಗಿ ತಲುಪುತ್ತಿಲ್ಲ; ಬದಲಿಗೆ ಭ್ರಷ್ಟರ ಕಿಸೆ ತುಂಬಿಸುತ್ತಿವೆ. ನಮ್ಮ ಸರ್ಕಾರ ಈ ನಿಟ್ಟಿನಲ್ಲಿ ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು. ಮೊತ್ತ ಮೊದಲಿಗೆ ಭ್ರಷ್ಟಾಚಾರ ನಿಯಂತ್ರಣಕ್ಕೆ ಅತ್ಯಂತ ಬಲಯುತವಾದ ಲೋಕಪಾಲ್ ಮಸೂದೆಯನ್ನು ಜಾರಿಗೆ ತರಬೇಕು. ಜಾಗತಿಕ ಮಟ್ಟದ ಅರ್ಥತಜ್ಞರೆಂಬ ಖ್ಯಾತಿ ಪಡೆದಿರುವ ನಮ್ಮ ಪ್ರಧಾನಿ ಮನಮೋಹನ್ ಸಿಂಗ್ ಅವರು ರಾಜಕೀಯ ಒತ್ತಡಗಳನ್ನು ಲೆಕ್ಕಿಸದೆ ಕಾರ್ಯ ತತ್ಪರಾಗಬೇಕೆಂಬುದು ಎಲ್ಲರ ಬಯಕೆ.

ನಾವಿರುವುದು ಭಾರತ ದೇಶದಲ್ಲಿ. ನಾವು ಬದುಕಬೇಕಾದ್ದು ಭಾರತೀಯತೆಯನ್ನು ಉಸಿರಾಡಿ. ಭಾರತಾಂಬೆಗೆ ಹತ್ತಾರು ಮಕ್ಕಳು. ಅವುಗಳಲ್ಲಿ ಕನ್ನಡ, ಮರಾಠಿ, ತಮಿಳು, ತೆಲುಗು. . .ಮುಂತಾದವು. ಹೊಂದಾಣಿಕೆಯಿಂದ ಪರಿಪೂರ್ಣ ಅಭಿವೃದ್ಧಿಯತ್ತ ಸಾಮರಸ್ಯದಿಂದ ಹೆಜ್ಜೆ ಇಡುವುದು ಅತ್ಯವಶ್ಯ. ಬದಲಿಗೆ ವಿವಿಧ ರಾಜ್ಯಗಳಲ್ಲಿ ವಾಸಿಸುವ ಭಾಷಾ ಅಲ್ಪ ಸಂಖ್ಯಾತರು ಭಾಷೆಯ ಕಾರಣಕ್ಕೆ ರಾಜಕೀಯ ಪ್ರೇರಿತರಾಗಿ ವೈಷಮ್ಯವನ್ನು ಬಿತ್ತುವುದು ನಿಜಕ್ಕೂ ಖಂಡನೀಯ. ಬೆಳಗಾವಿಯ ಮರಾಠಿ ಅಲ್ಪ ಸಂಖ್ಯಾತರು ಇತ್ತೀಚೆಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಡಾ. ಚಂದ್ರಶೇಖರ ಕಂಬಾರ ಹಾಗೂ ಕನ್ನಡ ಭಾಷೆಯ ಬಗ್ಗೆ ನಡೆದುಕೊಳ್ಳುತ್ತಿರುವ ರೀತಿ ಅತ್ಯಂತ ದುರದೃಷ್ಟಕರ. ಮುಂಬೈನಲ್ಲಿ ಆತಂಕವಾದಿಗಳ ಆಕ್ರಮಣದ ಸಂದರ್ಭದಲ್ಲಿ ಕನ್ನಡದ ನೆಲದ ಮೇಜರ್ ಸಂದೀಪ್ ಮುಂಬೈ ಅನ್ನು ರಕ್ಷಿಸುವ ಪ್ರಕ್ರಿಯೆಲ್ಲಿ ಹುತಾತ್ಮನಾದ. ಮುಂಬೈ ಇಂದು ವಾಣಿಜ್ಯ ನಗರಿಯಾಗಿ ದಾಪುಗಾಲುಗಳನ್ನಿಡುತ್ತಿರುವುದಕ್ಕೆ ಅಲ್ಲಿ ನೆಲೆಸಿರುವ ಕನ್ನಡ ಬಂಧುಗಳ ಉದ್ಯಮಶೀಲತೆ ಹಾಗೂ ಜಾಣ್ಮೆಗಳು ಅಮೂಲ್ಯ ಕಾಣಿಕೆ ನೀಡಿವೆ. ಅಲ್ಲಿ ನೆಲೆಸಿರುವ ಕನ್ನಡಿಗರು ಮೊದಲು ಮಹಾರಾಷ್ಟ್ರದ ಪ್ರಜೆಗಳು, ನಂತರ ಕನ್ನಡಿಗರು. ಕನ್ನಡಿಗರು ಪರನೆಲಗಳಲ್ಲಿ ಎಂದೂ ತಮ್ಮ ಭಾಷೆಯ ಪಾರಮ್ಯವನ್ನು ಹೇರುವ ಉದ್ಧಟತನವನ್ನು ಮಾಡಿಲ್ಲ, ಮಾಡುವುದೂ ಇಲ್ಲ. ಅಲ್ಲದೆ ಮರಾಠಿ ಭಾಷೆಯ ಜನರ ಬಗ್ಗೆ ನಮಗೆ ಅಪಾರ ಗೌರವವಿದೆ. ಏಕೆಂದರೆ ನಮ್ಮ ಹೆಮ್ಮೆಯ ಕವಿ ದ.ರಾ.ಬೇಂದ್ರೆ ಹಾಗೂ ಅಪರೂಪ ಚಿಂತನೆಯ ವಿದ್ವಾಂಸ ಶಂ.ಬಾ. ಜೋಷಿ ಅವರ ಮನೆ ಮಾತು ಮರಾಠಿಯಾಗಿತ್ತು. ನಮ್ಮ ಬೆಳಗಾವಿಯ ಮರಾಠಿ ಸೋದರರು ಕೃತ್ರಿಮ ರಾಜಕಾರಣಿಗಳ ಕೈ ಗೊಂಬೆಗಳಾಗಿ ವರ್ತಿಸುತ್ತಿರುವುದು ಈ ಅತಿರೇಕಗಳಿಗೆ ಕಾರಣ. ಕೇವಲ ಹಣ ಹಾಗೂ ಸ್ವಾರ್ಥ ಹಿತಾಸಕ್ತಿಗಳನ್ನು ಗುರಿಯಲ್ಲಿಟ್ಟುಕೊಂಡು ರಾಜಕಾರಣದಿಂದ ನಾವು ದೂರವಿರುವುದು ಅತ್ಯಂತ ಅನಿವಾರ್ಯ. ಬೆಳಗಾವಿಯ ಭಾಷಾ ಅಲ್ಪಸಂಖ್ಯಾತರಿಗೆ ಈ ಸತ್ಯ ಸಾಕ್ಷಾತ್ಕಾರವಾಗಲಿ, ಮೊದಲು ಅವರು ಕನ್ನಡ ನೆಲದ ಪ್ರಜೆಗಳಂತೆ ಬದುಕಲಿ, ನಂತರ ಮರಾಠಿಗರಾಗಿ ಅವರ ಸಂಸ್ಕೃತಿಯನ್ನು ಕಾಪಾಡಲಿ–ಎಂಬುದು ನಮ್ಮ ಸದಾಶಯ.

*2011 ವರ್ಷ ಮುಗಿದು, 2012 ಹೊಸ ವರ್ಷ ಇದೀಗ ಕಾಲಿಡಲಿದೆ. ಜಗತ್ತಿಗೆ ಶಾಂತಿ ಸಾರಿದ ದೇವದೂತ ಕ್ರಿಸ್ತನ ಜಯಂತಿ ಹಾಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.*

❑ ಉಷಾ ಭರತಾದ್ರಿ

ಅಂತರಾಳದಿಂದ...

# ಪಶ್ಚಿಮದತ್ತ ಕನ್ನಡದ ಜಗತ್ತು

ಇತ್ತೀಚೆಗೆ ಕನ್ನಡದ ಜಗತ್ತನ್ನು ಪಶ್ಚಿಮದತ್ತ ಪಸರಿಸುವದರ ಬಗ್ಗೆ, ಕನ್ನಡದ ಕಂಪನ್ನು ಜಾಗತೀಕರಣದ ಸಂದರ್ಭದಲ್ಲಿ ಹೇಗೆ ಪ್ರಸ್ತುತಗೊಳಿಸಬೇಕೆಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಪತ್ರಿಕೆಗಳಲ್ಲಿ ಪ್ರಮುಖವಾಗಿ ಈ ಚರ್ಚೆ ನಡೆಯುತ್ತಿದೆ. ಯುರೋಪಿನ ಹಾಗೂ ಅಮೆರಿಕೆಯ ವಿಶ್ವವಿದ್ಯಾಲಯಗಳಲ್ಲಿ, ಸಂಶೋಧನಾ ಸಂಸ್ಥೆಗಳಿಗೆ ಕನ್ನಡದ ಪರಿಣಿತರನ್ನು ಕಳುಹಿಸುವುದರ ಬಗ್ಗೆ ಬರೆಯಲಾಗಿದೆ. ಇದು ನಿಜವಾಗಿಯೂ ಆಗಬೇಕಾದ ಕೆಲಸ. ಸರಕಾರ ಇದಕ್ಕೆ ಬೇಕಾದ ಎಲ್ಲ ಸವಲತ್ತು ಹಾಗೂ ಹಣಕಾಸಿನ ಸಹಾಯ ನೀಡಿದರೆ ಇದು ಸಾಧ್ಯವಾಗಬಹುದು. ಈಗಾಗಲೇ ಈ ಕುರಿತಾಗಿ ಸರಕಾರ ಕಾರ್ಯಪ್ರವೃತ್ತವಾಗಿದೆ. ಯುರೋಪಿನಲ್ಲಿ, ಮುಖ್ಯವಾಗಿ ಜರ್ಮನಿಯಲ್ಲಿ, ಕನ್ನಡದ ಕುರಿತಾದ ಸಂಶೋಧನೆಗಳಿಗಾಗಿ ಪರಿಣಿತರನ್ನು ಕರ್ನಾಟಕ ಸರಕಾರ ಕಳುಹಿಸಿದೆ. ಕನ್ನಡದ ಸಂಸ್ಕೃತಿ ಹಾಗೂ ಸಾಹಿತ್ಯ ಹೆಚ್ಚು ಪ್ರವರ್ಧಮಾನಕ್ಕೆ ಬರಲು, ಅದರಲ್ಲೂ ವಿದೇಶಗಳಲ್ಲಿ, ಭಾಷಾಂತರದ ಅಗತ್ಯವಿದೆಯೆಂಬುದು ಹಲವರ ಅಭಿಪ್ರಾಯ. ಇದು ಸಹ ಒಪ್ಪಬೇಕಾದ್ದೇ.

ಇವೆಲ್ಲ ವಿದೇಶದ ಮಾತಾಯಿತು. ಯುರೋಪ್ ಹಾಗೂ ಅಮೆರಿಕಾ ದೇಶಗಳಿಗೆ ಹೋಗಲು ಎಲ್ಲರಿಗೂ ತವಕ. ಅವರು 'ಹೌದಪ್ಪಾ' ಎಂದು ಒಪ್ಪಿದರೆ ನಮಗೆಲ್ಲ ಒಂದು ಬಗೆಯ ಸಂತಸ. ಅವರು 'ಇದು ದೊಡ್ಡದು, ತುಂಬಾ ಸತ್ವಯುತವಾದದ್ದು' ಎಂದು ಬಿಟ್ಟರೆ ನಮಗೆ ಎಲ್ಲಿಲ್ಲದ ಆನಂದ. ಅವರೇ ಇಲ್ಲಿಯವರೆಗೆ ಬಂದು, ನಮ್ಮ ದೇಶದ ಕಷ್ಟಮಯ ವಾತಾವರಣದಲ್ಲಿ ಉಳಿದುಕೊಂಡು ನಮ್ಮ ಕುರಿತಾಗಿ ಸಂಶೋಧನೆ ಮಾಡಿಬಿಟ್ಟರೆ ನಮಗೆ ಒಂದು ಬಗೆಯ ಹೆಗ್ಗಳಿಕೆ. ಈ ಬಗೆಯ ವಿದೇಶಿ ಮೋಹ ನಮ್ಮನ್ನೆಲ್ಲ ಅಷ್ಟು ಸುಲಭವಾಗಿ ಬಿಡುವುದಿಲ್ಲ. ಈ ಬಗೆಯ ವ್ಯಾಮೋಹವನ್ನು ನಮ್ಮ ದೇಶದ ಕೆಲ ಚಿಂತಕರು 'ವಸಹಾತುಶಾಹಿ ಧೋರಣೆ' ಎಂಬ ಹಣೆಪಟ್ಟಿ ಹಚ್ಚಿ ಇರಿಸಿದರು. ನಮ್ಮನ್ನಾವರಿಸಿದವರು ಬಿಟ್ಟು ಹೋದರೂ ನಾವು ಅವರ ಭೌದ್ಧಿಕ ಅಡಿಯಾಳುಗಳಾಗಿ ಅರಿವಿಲ್ಲದೆ ಬದುಕುತ್ತಿದ್ದೇವೆ ಎಂಬ ವಿಚಾರವೂ ಇದೆ.

ಈ ಬಗೆಯ ಚಿಂತನಾ ಪರಿಧಿಯಿಂದ ಹೊರಗೆ ಬರುವುದಾದರೂ ಹೇಗೆ? ಕನ್ನಡವೆಂಬುದು, ಅದರ ಸಂಸ್ಕೃತಿಯೆಂಬುದನ್ನು ಯಾರು ಹೇಗೆ ಗ್ರಹಿಕೆ ಮಾಡಿಕೊಳ್ಳುತ್ತಾರೆಂಬುದರ ಬಗ್ಗೆ ನಾವು ಯಾಕೆ ತಲೆ ಕೆಡಿಸಿಕೊಳ್ಳಬೇಕು? ನಮ್ಮಲ್ಲಿ ಇದ್ದದ್ದನ್ನು ಹೇಗೆ ಉಳಿಸಿಕೊಳ್ಳಬೇಕೆಂಬುದು ದೊಡ್ಡ ಪ್ರಶ್ನೆ. ಹೋಗಲಿ ಈ ಭಾರತ ದೇಶದಲ್ಲೇ 'ಕನ್ನಡ'ವೆಂಬ ಭಾಷೆಯ ಬಗ್ಗೆ ಇತರ ಭಾಷಿಕರಿಗೆ ಗೊತ್ತಿದೆಯೇ? ಬುದ್ಧಿವಂತರಾದ ಬಹು ಬಂಗಾಳಿಗಳಿಗೆ ಕರ್ನಾಟಕದಲ್ಲಿ ಮಾತನಾಡುವ ಭಾಷೆ 'ಕನ್ನಡ'ವೆಂದು ಗೊತ್ತಿಲ್ಲ. 'ಕರ್ನಾಟಕಿ'ಯೆಂದೊ, 'ಕನ್ನಡಿ'ಯೆಂಬ ಭಾಷೆಯನ್ನು ಕನ್ನಡಿಗರು ಮಾತನಾಡುತ್ತಾರೆಂದು ಅವರು ಹೇಳುತ್ತಾರೆ. ಇದೇ ಬಗೆಯ ಸಮಸ್ಯೆ ಬೇರೆ ಬೇರೆ ರಾಜ್ಯಗಳಲ್ಲಿನ ಜನರಲ್ಲಿ ಇದೆ. ತಮ್ಮ ದೇಶದ ಇನ್ನೊಂದು ಬದಿಯ ಜನರ ಬದುಕಿನ ಪರಿ ಅವರಾರಿಗೂ ಗೊತ್ತಿಲ್ಲ. ಹೋಗಲಿ ಕರ್ನಾಟಕದವರಿಗೆ ಗೊತ್ತಿದೆಯೇ? ಸಾಫ್ಟ್‌ವೇರ್ ಹಾಗು ಇತರ ಕೆಲ ಕಾರಣಗಳಿಂದಾಗಿ ಬೆಂಗಳೂರಿನ ಪರಿಚಯ ದೇಶದ ಎಲ್ಲರಿಗೂ ಚೆನ್ನಾಗಿಯೆ ಇದೆ. ಆದರೆ 'ಕನ್ನಡ'ದ ಪರಿಚಯವಿಲ್ಲ.

ಈ ಬಗೆಯ ಸಮಸ್ಯೆಯ ನಿವಾರಣೆಗಾಗಿ ದೇಶದ ಪ್ರಮುಖ ಶಹರಗಳಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ 'ಕನ್ನಡದ ಪೀಠ'ವನ್ನು ಪ್ರಾರಂಭಿಸುವುದರ ಬಗ್ಗೆ ವಿಸ್ತಾರವಾದ ಚರ್ಚೆ ನಡೆಯಬೇಕಾಗಿದೆ. ಅದರಲ್ಲೂ ದೆಹಲಿಯಲ್ಲಿ ಈ ಪೀಠದ ಅವಶ್ಯಕತೆಯಿದೆ. ದೆಹಲಿ ವಿಶ್ವವಿದ್ಯಾಲಯದಲ್ಲಿನ ಅಧುನಿಕ ಭಾರತೀಯ ಭಾಷಾ ಸಂಸ್ಥಾನದಲ್ಲಿ ಕನ್ನಡದ ಕುರಿತಾಗಿ ಅತ್ಯುತ್ತಮ ಸಂಶೋಧನೆಗಳು, ವಿಚಾರ ಸಂಕಿರಣಗಳು ನಡೆದಿವೆ. ದೆಹಲಿ ಕರ್ನಾಟಕ ಸಂಘವೂ ಇದರಲ್ಲಿ ಭಾಗಿಯಾಗಿತ್ತು ಎಂಬುದನ್ನು ನೆನಪಿಸಬೇಕಾಗಿದೆ.

ಅದೇ ರೀತಿಯಲ್ಲಿ ಈಗ ದೆಹಲಿಯ ಜವಾಹರಲಾಲ ನೆಹರು ವಿಶ್ವವಿದ್ಯಾಲಯದ (ಜೆ ಎನ್ ಯು) ಭಾರತೀಯ ಭಾಷಾ ಸಂಸ್ಥಾನದಲ್ಲಿ ಈಗ ಕನ್ನಡದ ಪೀಠದ ಸ್ಥಾಪನೆಯಾಗಬೇಕಾಗಿದೆ. ಭಾರತದ ಬೇರೆ ಬೇರೆ ಭಾಷೆಗಳ ಪೀಠಗಳು ಅಲ್ಲಿವೆ. ಕನ್ನಡ ಯಾಕೊ ಇನ್ನೂ ಅಲ್ಲಿಗೆ ಕಾಲಿಟ್ಟಿಲ್ಲ. ಹಲವಾರು ಕನ್ನಡದ ವಿದ್ವಾಂಸರು ಈ ಕುರಿತಾಗಿ ರಾಜಕೀಯ ಧುರೀಣರೊಂದಿಗೆ ಅಹವಾಲು ಮಾಡಿಕೊಂಡರೂ ಇಲ್ಲಿಯ ತನಕ ಏನೂ ಪ್ರಯೋಜನವಾಗಲಿಲ್ಲ. ಕರ್ನಾಟಕದ ಒಂದು ಉಚ್ಚ ನಿಯೋಗ (ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿಗಳನ್ನೊಳಗೊಂಡು) ಜವಾಹರಲಾಲ ನೆಹರು ವಿಶ್ವವಿದ್ಯಾಲಯದ ಉಪಕುಲಪತಿಗಳನ್ನು ಭೇಟಿಯಾಗಿ ಈ ಕುರಿತಾಗಿ ಚರ್ಚೆ ನಡೆಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ನಂತರದಲ್ಲಿ ಏನೂ ಆಗಲಿಲ್ಲ. ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಈ ಭಾಷಾ ಸಂಸ್ಥಾನದಲ್ಲಿ ತಮಿಳು, ಬಂಗಾಳಿ ಹಾಗೂ ಇತರ ಭಾರತೀಯ ಭಾಷೆಗಳ ಪೀಠಗಳು ಈಗಾಗಲೇ ಉತ್ತಮವಾದ ಕೆಲಸ ಮಾಡುತ್ತಿವೆ. ಕನ್ನಡವೂ ಹಿಂದೆ ಬೀಳದಂತೆ ನಾವು ನೋಡಿಕೊಳ್ಳಬೇಕಾಗಿದೆ. ಜೆ ಎನ್ ಯು ಜಗತ್ತಿನ ಉನ್ನತ ವಿಶ್ವವಿದ್ಯಾಲಯಗಳಲ್ಲಿ ಒಂದು ಎಂಬ ಮಾನ್ಯತೆಯನ್ನು ಪಡೆದಿದೆ. ಬೇರೆ ಬೇರೆ ದೇಶಗಳ (ಯುರೋಪ್ ಹಾಗೂ ಅಮೆರಿಕೆಯ ಹೊರತಾಗಿ) ಹಲವಾರು ವಿದ್ವಾಂಸರು ಇಲ್ಲಿಗೆ ಬರುತ್ತಿರುತ್ತಾರೆ. ಕನ್ನಡದ ಕಂಪು ವಿಸ್ತಾರವಾಗಿ ಪಸರಿಸುವದರಲ್ಲಿ ಯಾವ ಸಂಶಯವೂ ಇಲ್ಲ. ಈಗ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಹೆಗ್ಗಳಿಕೆಯೂ ಇದೆ. ಈ ಹೆಗ್ಗಳಿಕೆಗನುಗುಣವಾಗಿ ಕನ್ನಡದ ಬಾವುಟವನ್ನು ನಾವೆಲ್ಲ ಹಾರಿಸಬೇಕಾಗಿದೆ. ಸರಕಾರದೊಂದಿಗೆ ಈ ದಿಶೆಯಲ್ಲಿ ಕೈಜೋಡಿಸಿ ದೆಹಲಿ ಕರ್ನಾಟಕ ಸಂಘವೂ ಕೆಲಸ ಮಾಡುತ್ತಿದೆಯೆಂದು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ. ಬಹುಶಃ ಸರಕಾರ ಮನಸ್ಸು ಮಾಡಿದರೆ ಈ ನಮ್ಮೆಲ್ಲರ ಕನಸು ನನಸಾಗುವುದರಲ್ಲಿ ಯಾವ ತೊಂದರೆಯೂ ಕಾಣಿಸುತ್ತಿಲ್ಲ.

■ ಡಾ. ವೆಂಕಟಾಚಲ ಹೆಗಡೆ

## ಉಚಿತ ವೈದ್ಯಕೀಯ ತಪಾಸಣೆ

ಡಿಸೆಂಬರ್ ತಿಂಗಳ 25ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ.

## ಓದುಗರ ಅನಿಸಿಕೆ

ಸಂತೋಷ್ ಕುಮಾರ್ ಉಪಾಧ್ಯಾಯರು ಬರೆದ ನೇರ ನಡೆ ನುಡಿಯ ನ್ಯಾಯವಾದಿ ಶ್ರೀ ಮರೋಳ ವೀರಪ್ಪ ಹಾಗೂ ಉಷಾ ಭರತಾದ್ರಿ ಬರೆದ ದೆಹಲಿ ಜೀವನ-ಕನ್ನಡ ಸ್ಪಂದನ-ಶ್ರೀಮತಿ ಸುಮಿತ್ರಾ ರಾವ್ ಓದಿದೆ. ನಿಜವಾಗಿಯೂ ಅವರು ದೆಹಲಿ ಕರ್ನಾಟಕ ಸಂಘದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಗೆ ಅರ್ಹರು. ದಿನಕ್ಕೊಂದು ಘೋಲೇ ಕುಲ್ಚಾ ತಿಂದು ದಿನದೂಡಿದ ಶ್ರೀ ವೀರಪ್ಪನವರು ಹೇಳಿದ ಮಾತು ಸಮಾಜಕ್ಕಾಗಿ ನಾವು ನಮಗಾಗಿ ಸಮಾಜ-ಮೆಲುಕಾಡುವಂತಹದು.

ದೆಹಲಿಯಲ್ಲಿ ಇಂತಹ ಕನ್ನಡಿಗರು ಪ್ರಾಮಾಣಿಕರಾಗಿ, ಪರಿಶ್ರಮಿಗಳಾದುದರಿಂದ ಹೆಸರು ಗಳಿಸಿದರು. ಅಂತವರ ಜೀವನ ನಮಗೆಲ್ಲ ಮಾರ್ಗದರ್ಶಿಯಾಗಿರಲಿ.

■ ಪ.ವೆಂ. ನಾಯಕ, ನವದೆಹಲಿ



## ಮುನ್ನೋಟ

ಕನ್ನಡ ರಾಜ್ಯೋತ್ಸವ ಮುಗಿಯಿತು. ನವೆಂಬರ್ ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ತಿಂಗಳಿನ ಮೊದಲನೇ ತಾರೀಖಿನಿಂದ ಹಿಡಿದು ಪ್ರತೀ ವಾರವೂ ಸಂಘದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು. ಎಲ್ಲಾ ಕಾರ್ಯಕ್ರಮಗಳು ತುಂಬಾ ಚೆನ್ನಾಗಿ ನಡೆದಿದ್ದು 19 ಮತ್ತು 20 ರ ಕಾರ್ಯಕ್ರಮವು ಸಂಘದ ಇತಿಹಾಸದಲ್ಲೇ ನಡೆಯದ ಕಾರ್ಯಕ್ರಮವು ನಡೆದಿದೆ ಎಂದರೆ ತಪ್ಪಾಗಲಾರದು. ಕರ್ನಾಟಕ ಸರ್ಕಾರ ವಾರ್ತಾ ಇಲಾಖೆ, ಸಂಸ್ಕೃತಿ ಇಲಾಖೆ ಮತ್ತು ದೆಹಲಿ ಕರ್ನಾಟಕ ಸಂಘವು ಸೇರಿ ಒಂದು ಅದ್ಭುತವಾದ ಹತ್ತು ದಿನಗಳ ಶಿಬಿರ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರ ನೇತೃತ್ವದಲ್ಲಿ ನಡೆಸಿ, ಸ್ಥಳೀಯ ಕನ್ನಡಿಗರಿಗೆ ಕಾರ್ಯಕ್ರಮಗಳನ್ನು ಕರ್ನಾಟಕದ ಖ್ಯಾತ ಕಲಾವಿದರುಗಳಿಂದ ತರಬೇತಿ, ದೆಹಲಿ ಕನ್ನಡಿಗರಿಗೆ ಹೆಜ್ಜೆ ಹಾಕಿಸಿದ್ದು, ಅದರಲ್ಲಿ ನಾಡಗೀತೆ, ಸುಗಮ ಸಂಗೀತ, ರಂಗ ಗೀತೆ, ಜಾನಪದ ಗೀತೆ, ಜಾನಪದ ನೃತ್ಯ, ಸಮೂಹ ನೃತ್ಯ, ಪುಟಾಣಿಗಳ ಸಮೂಹ ನೃತ್ಯ, ಕೋಲಾಟ, ಬೀಸು ಕಂಸಾಳೆ, ಲಂಬಾಣಿ ನೃತ್ಯ ಮುಂತಾದ ಕಾರ್ಯಕ್ರಮಗಳನ್ನು ಸ್ಥಳೀಯ ಕಲಾವಿದರಿಂದ ಸುಮಾರು ಐದು ವರ್ಷದಿಂದ ಹಿಡಿದು ಎಪ್ಪತ್ತೈದು ವರ್ಷದ ವಯಸ್ಸಿನವರೆಗೂ ಹೆಜ್ಜೆ ಹಾಕಿ ಕುಣಿಸಿ, 180 ಕಲಾವಿದರನ್ನು ಒಂದೇ ವೇದಿಕೆಯ ಮೇಲೆ ಕುಣಿಸಿದ ಕೀರ್ತಿ ದೆಹಲಿ ಕರ್ನಾಟಕ ಸಂಘದ್ದು. ಈ ಕಾರ್ಯಕ್ರಮಕ್ಕೆ ಎಲ್ಲಾ ಕನ್ನಡಿಗರು ಸುಮಾರು 600 ಜನ ಪಾಲ್ಗೊಂಡಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಎಲ್ಲಾ ಕನ್ನಡಿಗರಿಗೂ ಸಂಘದ ಪರವಾಗಿ ಅಭಿನಂದನೆ. ಜೊತೆಗೆ ಹತ್ತು ದಿನಗಳ ಶಿಬಿರದಲ್ಲಿ ಅಚ್ಚುಕಟ್ಟಾಗಿ ಕಲಾವಿದರಿಗೆ ತರಬೇತಿ ನೀಡಿದ ತರಬೇತುದಾರರಾದ ನಿಶಾಂತ್ ವೆಂಕಟೇಶ್, ನರಸಿಂಹ ಮೂರ್ತಿ, ಕಲ್ಪನಾ ನಾಗನಾಥ್, ಶುಭಾಂಗಿ, ಅನಿತಾ, ರಾಜಣ್ಣ, ಸಿದ್ದರಾಜು ಇವರೆಲ್ಲರಿಗೂ ಸಂಘದ ಪರವಾಗಿ ಅಭಿನಂದನೆಗಳು. ಜೊತೆಗೆ ಗುರ್‌ಗಾಂವ್ ಕನ್ನಡ ಸಂಘಕ್ಕೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಕೀರ್ತಿ ದೆಹಲಿಯ ಕಲಾವಿದರದ್ದು. ಈ ಕಾರ್ಯಕ್ರಮವನ್ನು ನಡೆಸಲು ಸಹಕರಿಸಿದ ಕರ್ನಾಟಕ ಸರ್ಕಾರ, ವಾರ್ತಾ ಇಲಾಖೆ, ಸಂಸ್ಕೃತಿ ಇಲಾಖೆ ಹಾಗೂ ಈ ಕಾರ್ಯಕ್ರಮದಲ್ಲಿ ಶ್ರಮಿಸಿದ ಎಲ್ಲಾ ಕನ್ನಡ ಅಭಿಮಾನಿಗಳಿಗೆ ಅಭಿನಂದನೆಗಳು. ಡಿಸೆಂಬರ್ ತಿಂಗಳ 18ರಂದು ಮೈಲಾರ ಮಹದೇವ ನಾಟಕ ಪ್ರದರ್ಶನಗೊಳ್ಳಲಿದೆ, ಬನ್ನಿ.

ಸಂಘದ ಪಿಕ್‌ನಿಕ್ ಉಪಸಮಿತಿ ಸಭೆ ಸೇರಿ ಜನವರಿ ತಿಂಗಳಿನಲ್ಲಿ ಪಿಕ್‌ನಿಕ್ ಹಮ್ಮಿಕೊಳ್ಳುವ ತೀರ್ಮಾನವನ್ನು ತೆಗೆದುಕೊಂಡಿದೆ. ದೆಹಲಿಯಿಂದ ಹೊರಗಡೆ ಸ್ಥಳಗಳಿಗೆ ಪಿಕ್‌ನಿಕ್ ಆಯೋಜನೆ ಮಾಡುವ ಉದ್ದೇಶವಿದೆ. ಸ್ಥಳ, ದಿನಾಂಕ ನಿರ್ಧಾರಗೊಂಡ ನಂತರ ತಿಳಿಸಲಾಗುವುದು.

■ ಸಿ.ಎಂ. ನಾಗರಾಜ

## ದೆಹಲಿ ಕರ್ನಾಟಕ ಸಂಘ

ರಾವ್ ತುಲಾರಾಂ ಮಾರ್ಗ, ಸೆಕ್ಟರ್-12, ಆರ್.ಕೆ. ಪುರಂ, ನವದೆಹಲಿ-110022

**18 ಡಿಸೆಂಬರ್ 2011ರ ಭಾನುವಾರ**
**ಸಮಯ : ಸಂಜೆ 4.30 ಗಂಟೆಗೆ**
**ಸ್ಥಳ : ಸಂಘದ ಸಭಾಂಗಣ**

ಕ್ಷೀರಸಾಗರ ಮಿತ್ರಕೂಟ (ರಿ)ಮಂಡ್ಯ, ಪ್ರಸ್ತುತಪಡಿಸುವ ನಾಟಕ

## ಮೈಲಾರ ಮಹದೇವ

ರಚನೆ : ಮನುಬಳಿಗಾರ್, ನಿರ್ದೇಶನ : ಮಾಲತೇಶ್ ಬಡಿಗೇರ್
ಸಂಗೀತ : ಕೃಷ್ಣೇ ಗೌಡ

## ಪುಸ್ತಕ ಬಿಡುಗಡೆ ಸಮಾರಂಭ

ಎಂ.ಡಿ. ಬೀಳಗಿ ಅವರ "ಏಜೆಂಟ್ ಕೋಬ್ರಾ" ಕನ್ನಡ ಕಾದಂಬರಿಯ ಬಿಡುಗಡೆ

ಡಾ. ವೆಂಕಟಾಚಲ ಹೆಗಡೆ ಅವರಿಂದ
ಅಧ್ಯಕ್ಷರು ದೆಹಲಿ ಕರ್ನಾಟಕ ಸಂಘ

## ತಮಗೆಲ್ಲರಿಗೂ ಆದರದ ಸ್ವಾಗತ

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

# 2010ರ ಸಾಲಿನ ಪ್ರತಿಷ್ಠಿತ 'ಸರಸ್ವತಿ ಸಮ್ಮಾನ್' ಪ್ರಶಸ್ತಿಯನ್ನು ಸ್ವೀಕರಿಸಿದ ಎಸ್.ಎಲ್. ಭೈರಪ್ಪನವರ ಭಾಷಣದ ಕನ್ನಡ ಅನುವಾದ.




ನನ್ನ ಕಾದಂಬರಿ 'ಮಂದ್ರ'ವನ್ನು 201ರ ಸರಸ್ವತಿ ಸಮ್ಮಾನಕ್ಕೆ ಆರಿಸಿದ ಸಮಿತಿಗೆ ಧನ್ಯವಾದಗಳು. ಹಾಗೆಯೇ ಮೊದಲಿನಿಂದಲೂ ಭಾರತದ ಹಲವಾರು ಭಾಷೆಗಳಲ್ಲಿ ನನ್ನ ಸಾಹಿತ್ಯ ಜೀವನದ ಬೆನ್ನೆಲುಬಾಗಿರುವ ಅಸಂಖ್ಯ ಓದುಗರಿಗೆ ನಾನು ಋಣಿಯಾಗಿದ್ದೇನೆ.

ನನ್ನ ಜೀವನವನ್ನು ನೆನಸಿಕೊಳ್ಳದೆ ನನ್ನ ಸಾಹಿತ್ಯದ ಉಗಮ ಮತ್ತು ಬೆಳವಣಿಗೆಯನ್ನು ಕುರಿತು ಮಾತನಾಡುವುದು ಸಾಧ್ಯವಿಲ್ಲ. ಕರ್ನಾಟಕದ ಒಂದು ಹಿಂದುಳಿದ ಹಳ್ಳಿಯ ತೀರಾ ಬಡತನದ ಕುಟುಂಬದಲ್ಲಿ ನಾನು ಹುಟ್ಟಿದೆ. ದುಡಿಮೆ ಮತ್ತು ಪಾಲನೆಗಳೆಲ್ಲ ನನ್ನ ತಾಯಿಯದಾಗಿತ್ತು : ತಂದೆಯು ಅತ್ಯಂತ ಬೇಜವಾಬ್ದಾರಿಯ ಮನುಷ್ಯ. ನಾನು ಹತ್ತು ವರ್ಷದವನಾಗಿದ್ದಾಗ ನನಗೆ, ಹದಿನೈದು ದಿನದ ಹಿಂದೆ ಮದುವೆಯಾಗಿದ್ದ ಅಕ್ಕನಿಗೆ ಮತ್ತು ನನಗಿಂತ ಎರಡು ವರ್ಷಕ್ಕೆ ಹಿರಿಯನಾದ ಅಣ್ಣನಿಗೆ ಪ್ಲೇಗು ಬಡಿದು ಅವರಿಬ್ಬರೂ ಒಂದು ಗಂಟೆಯ ಅಂತರದಲ್ಲಿ ಸತ್ತು ಹೋದರು. ಹೇಗೋ ನಾನು ಉಳಿದುಕೊಂಡೆ. ಎರಡು ವರ್ಷಗಳ ನಂತರ ತಾಯಿಯೂ ಪ್ಲೇಗಿನಿಂದ ಸತ್ತಳು. ನಾನು ನಾಲ್ಕು ಮೈಲಿ ದೂರದ ಒಂದು ಊರಿನಲ್ಲಿ ವಾರಾನ್ನ ಮಾಡಿಕೊಂಡು ಓದನ್ನು ಮುಂದುವರೆಸಿದೆ. ನನಗೆ ಹದಿನಾಲ್ಕು ವರ್ಷವಾಗಿದ್ದಾಗ ನಾಲ್ಕು ವರ್ಷ ವಯಸ್ಸಿನ ತಂಗಿ ಕಾಲರಾದಿಂದ ಸತ್ತಳು. ನನಗೆ ಹದಿನೈದು ವರ್ಷವಾಗಿದ್ದಾಗ ಆರು ವರ್ಷ ವಯಸ್ಸಿನ ನನ್ನ ತಮ್ಮನು ಗೊತ್ತಿಲ್ಲದ ಒಂದು ಕಾಯಿಲೆಯಿಂದ ಸತ್ತು ನಾನೇ ಅವನ ಹೆಣವನ್ನು ಹೆಗಲ ಮೇಲೆ ಹೊತ್ತು ಸ್ಮಶಾನಕ್ಕೆ ಒಯ್ದು ಊರಿನ ತೋಟಿಯ ಸಹಾಯದಿಂದ ಸೌದೆಯನ್ನು ಒಟ್ಟಿ ಅವನನ್ನು ಸುಟ್ಟು ಹತ್ತಿರದ ಒಂದು ತೋಟದ ಬಾವಿಯಲ್ಲಿ ಸ್ನಾನ ಮಾಡಿದೆ.

ಈ ಅನುಭವಗಳೆಲ್ಲ ನನ್ನಲ್ಲಿ ಸಾವು ಎಂದರೇನು? ಅದರ ಅರ್ಥವೇನು? ಅದು ಯಾಕೆ ಬರುತ್ತದೆ? ಎಂಬ ಪ್ರಶ್ನೆಗಳಾಗಿ ಕಾಡತೊಡಗಿದವು. ನಾನು ಮೈಸೂರಿನಲ್ಲಿ ಇಂಟರ್‌ಮೀಡಿಯೇಟ್ ಓದುವಾಗ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಯಮುನಾಚಾರ್ಯರನ್ನು ಕಂಡು ನನ್ನ ಈ ಪ್ರಶ್ನೆಗಳನ್ನು ತೋಡಿಕೊಂಡೆ. ಅವರು ಸಟೀಕಾ ಕಠೋಪನಿಷತ್ತಿನ ಕನ್ನಡ ಅನುವಾದದ ಒಂದು ಪುಸ್ತಕವನ್ನು ಕೊಟ್ಟು ಓದಲು ಹೇಳಿದರು. ಎಷ್ಟು ಏಕಾಗ್ರತೆಯಿಂದ ಓದಿದರೂ ಅದು ನನ್ನ ಸಮಸ್ಯೆಗೆ ಉತ್ತರ ಕಾಣಿಸಲಿಲ್ಲ; ಯಮನು ನಚಿಕೇತನಿಗೆ ಬೋಧಿಸಿದ ಯಾವ ತತ್ವವೂ ಅರ್ಥವಾಗಲಿಲ್ಲ. ಪ್ರಾಧ್ಯಾಪಕರನ್ನು ಮತ್ತೆ ಕಂಡು ಇದನ್ನು ಹೇಳಿದಾಗ ಅವರು, "ಇವೆಲ್ಲ ತತ್ವಶಾಸ್ತ್ರವನ್ನು ಕ್ರಮವಾಗಿ ಅಧ್ಯಯನ ಮಾಡಿದರೆ ಮಾತ್ರ ಅರ್ಥವಾಗುವ ವಿಷಯಗಳು. ನೀನು ಬಿ.ಎ.ಗೆ ತತ್ವಶಾಸ್ತ್ರವನ್ನು ತೆಗೆದುಕೊ" ಎಂದರು. ಹೀಗೆ ನಾನು ತತ್ವಶಾಸ್ತ್ರದಲ್ಲೇ ಬಿ.ಎ. ಮತ್ತು ಎಂ.ಎ. ಗಳನ್ನು ಮಾಡಿದೆ. ಹೀಗೆ ಒಟ್ಟು ಹನ್ನೆರಡು ವರ್ಷ ವಿದ್ಯಾರ್ಥಿಯಾಗಿ, ನಾಲ್ಕು ವರ್ಷ ಅಧ್ಯಾಪಕನಾಗಿ ಮತ್ತು ಸಂಶೋಧಕನಾಗಿ ಎಂಟು ವರ್ಷ ತತ್ವಶಾಸ್ತ್ರದಲ್ಲೇ ಮುಳುಗಿದ್ದೆ. ಅಷ್ಟರಲ್ಲಿ ನನಗೆ ಪ್ರಿಯವಾಗಿದ್ದ, ತತ್ವಶಾಸ್ತ್ರದ ಒಂದು ಶಾಖೆಯಾದ ಸೌಂದರ್ಯ ಮೀಮಾಂಸೆಯಲ್ಲಿ ಆಸಕ್ತಿ ಬೆಳೆದು ಸತ್ಯ ಮತ್ತು ಸೌಂದರ್ಯವನ್ನು ಕುರಿತು ಸಂಶೋಧನೆ ಮಾಡಿ ಆನಂತರ ಸೌಂದರ್ಯ ಮತ್ತು ನೀತಿಯ ಅಧ್ಯಯನದಲ್ಲಿ ತೊಡಗಿದೆ.

ಅಷ್ಟರಲ್ಲಿ ಎರಡು ವಿಷಯಗಳು ನನಗೆ ಅರಿವಾದವು ;

1. ಭಾರತ ಮತ್ತು ಪ್ರಾಚೀನ ಗ್ರೀಸ್‌ಗಳೆರಡರಲ್ಲೂ ವಿಶ್ವ ಅಥವಾ ಬ್ರಹ್ಮಾಂಡ ಮೀಮಾಂಸೆ, ಜ್ಞಾನಮೀಮಾಂಸೆ, ಮನಶಾಸ್ತ್ರ ಮತ್ತು ನೀತಿ ಶಾಸ್ತ್ರಗಳನ್ನು ಒಳಗೊಂಡಿದ್ದ ತತ್ವಶಾಸ್ತ್ರವು ಆಧುನಿಕ ಕಾಲದಲ್ಲಿ ಅವುಗಳೆಲ್ಲವನ್ನೂ ಕಳಚಿಕೊಂಡಿವೆ. ಖಭೌತ ವಿಜ್ಞಾನ, ಆಧುನಿಕ ಮನೋವಿಜ್ಞಾನ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಮಾನವ ಜನಾಂಗ ಶಾಸ್ತ್ರ, ನ್ಯಾಯಶಾಸ್ತ್ರ, ವೈದ್ಯ ವಿಜ್ಞಾನ, ತೌಲನಿಕ ಮತ ಧರ್ಮಶಾಸ್ತ್ರ ಮೊದಲಾದ ಜ್ಞಾನದ ಶಾಖೋಪಶಾಖೆಗಳ ಬೆಳವಣಿಗೆಯಿಂದ ತತ್ವಶಾಸ್ತ್ರವು ತನ್ನ ವ್ಯಾಪ್ತಿಯನ್ನು ಕಳೆದುಕೊಂಡು ಮೌಲ್ಯ ಮೀಮಾಂಸೆಗೆ ಅಡಕಗೊಂಡಿದೆ.

2. ವೇದ ಮತ್ತು ಉಪನಿಷತ್ತುಗಳು ಭಾರತದ ತತ್ವಶಾಸ್ತ್ರಕ್ಕೆ ಆಧಾರವಾಗಿದ್ದರೂ ನಮ್ಮ ರಾಷ್ಟ್ರದ ಜೀವನಾದರ್ಶಗಳನ್ನು ಜಿಜ್ಞಾಸೆಗೆ ಒಳಪಡಿಸಿ ಅವುಗಳಿಗೆ ಮೂರ್ತಸ್ವರೂಪ ಕೊಟ್ಟದ್ದು ರಾಮಾಯಣ ಮಹಾಭಾರತಗಳು. ವೇದಪಾರಮ್ಯವನ್ನು ತಿರಸ್ಕರಿಸುವ ಜೈನ ಬೌದ್ಧ ಧರ್ಮಗಳು ಕೂಡ ಉಪನಿಷತ್ ಯುಗಧರ್ಮದ ಜಿಜ್ಞಾಸೆಯಿಂದ ಹುಟ್ಟಿದವೇ. ಅವುಗಳು ಕೂಡ ತಮ್ಮವೇ ದೃಷ್ಟಿಯಲ್ಲಿ ರಾಮಾಯಣ ಮಹಾಭಾರತಗಳಿಂದ ಮೂರ್ತಗೊಂಡ ಮೌಲ್ಯಗಳನ್ನು ವಿನ್ಯಾಸಗೊಳಿಸಿಕೊಂಡವು. ಇವುಗಳನ್ನು ಅರ್ಥ ಮಾಡಿಕೊಳ್ಳುವ ವೇಳೆಗೆ ನಾನು ನನ್ನ ಪ್ರಥಮ ಮಹತ್ವದ ಕೃತಿ 'ವಂಶವೃಕ್ಷ'ವನ್ನು ಬರೆದಿದ್ದೆ. ಈ ಸಾಹಿತ್ಯ ಸೃಷ್ಟಿಯ ಅನುಭವವು, ನಮ್ಮ ರಾಷ್ಟ್ರದ ಜೀವನಾದರ್ಶಗಳಿಗೆ ಮೂರ್ತ ಸ್ವರೂಪ ಕೊಟ್ಟದ್ದು ಸಾಹಿತ್ಯಕೃತಿಗಳಾದ ರಾಮಾಯಣ ಮಹಾಭಾರತಗಳು ಎಂಬ ಅರಿವಿನಲ್ಲಿ ಬೆರೆತು ಜೀವನದ ಅರ್ಥವನ್ನು ಹುಡುಕಲು ನನಗೆ ಸಾಹಿತ್ಯವೇ ತಕ್ಕ ಮಾಧ್ಯಮ, ತರಗತಿಯಲ್ಲಿ ನಾನು ಪಾಠ ಮಾಡುತ್ತಿದ್ದ ಶುಷ್ಕ ಪಾಂಡಿತ್ಯದ ತತ್ವಶಾಸ್ತ್ರವಲ್ಲ ಎಂಬ ದಾರಿಯನ್ನು ತೋರಿಸಿತು.

ನಾನು ಬರೆಯಲು ಆರಂಭಿಸಿದಾಗಿನಿಂದ ಇದುವರೆಗೂ ಸಾಹಿತ್ಯ ನಿರ್ಮಿತಿಯು ಬದಲಾವಣೆ, ಆಧುನಿಕತೆ ಮತ್ತು ಹಿಂದುಳಿದವರನ್ನು ಮೇಲೆತ್ತುವ ಪ್ರಯತ್ನದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕು, ಹಾಗೆ ತೊಡಗಿಸಿಕೊಳ್ಳದ ಬರೆಹವು ಕೇವಲ ಬೂಸಾ ಎಂಬ ಒತ್ತಡವನ್ನು ಹಲವು ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳು ಹಾಕುತ್ತಿವೆ. ತತ್ವಶಾಸ್ತ್ರದ, ಅದರಲ್ಲೂ ಮೌಲ್ಯ ಮೀಮಾಂಸೆಯ ಹಿನ್ನೆಲೆಯುಳ್ಳ ನನಗೆ ಬದಲಾವಣೆ, ಆಧುನಿಕತೆ ಮತ್ತು ಹಿಂದುಳಿದವರನ್ನು ಮೇಲೆತ್ತುವ ಮೌಲ್ಯಗಳಲ್ಲಿ ನಂಬಿಕೆ ಇದೆ, ಬದ್ಧತೆಯೂ ಇದೆ. ಆದರೆ ಸಾಹಿತ್ಯವೆಂಬ ಮೌಲ್ಯವನ್ನು ಈ ಬೇರೆ ಮೌಲ್ಯಗಳಿಗೆ ಅಡಿಯಾಳು ಮಾಡಿ ದುಡಿಸಹೊರಟರೆ ಸಾಹಿತ್ಯವು ಸಾಹಿತ್ಯವಾಗಿ ಉಳಿಯುವುದಿಲ್ಲ, ಅಲ್ಲದೆ ಅದು ಪ್ರಚಾರ ಸಾಹಿತ್ಯವಾಗಿ ತೀರ ಅಲ್ಪಾಯುಷಿಯಾಗುತ್ತದೆ, ಎಂಬುದು ನನ್ನ ವಿಮರ್ಶಿತ ಶ್ರದ್ಧೆಯಾಗಿದೆ. ಸಾಹಿತ್ಯವೆಂಬುದೇ ಮೌಲ್ಯಾನ್ವೇಷಣಕ್ಕೆ ಅತ್ಯಂತ ವಿಶಾಲವಾದ ಸಾಧ್ಯತೆಗಳ ಕ್ಷೇತ್ರ. ಅದು ರಾಜಕೀಯ ಪಕ್ಷಗಳು ಮತ್ತು ಸಕ್ರಿಯವಾದಿಗಳು ಒತ್ತಾಯಿಸುವ ಮೌಲ್ಯಗಳನ್ನು ಅವುಗಳಿಗಿಂತ ಎತ್ತರವಾದ ಹಂತದಲ್ಲಿ ನಿಂತು ಜೀವನದ ಇತರ ಮೌಲ್ಯಗಳೊಡನೆ ಅವುಗಳ ಸಂಬಂಧವನ್ನು ಪರಿಶೀಲಿಸಿ ಬೆಳಕು ಚೆಲ್ಲಬೇಕು. ಸಾಹಿತ್ಯ ನಿರ್ಮಿತಿಯೊಂದರಿಂದಲೇ ಜೀವನದ ಅಶನವಸನಗಳ ನ್ಯಾಯ ಅನ್ಯಾಯಗಳ ವಾಸ್ತವ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಿಲ್ಲ. ಸಾಹಿತಿಯು ಸಕ್ರಿಯನಾಗಬಾರದೆಂಬ ನಿಷೇಧವಿಲ್ಲ; ಆದರೆ ಸಕ್ರಿಯನಾಗದವನು, ಸಕ್ರಿಯತೆಗೆ ಸಾಹಿತ್ಯ ನಿರ್ಮಿತಿಯನ್ನು ಅಡಿಯಾಳಾಗಿಸದವನು ನಿರ್ಮಿಸುವುದು ಸಾಹಿತ್ಯವೇ ಅಲ್ಲವೆಂಬ ಅಂಥ ಪ್ರಣಾಲಿಯಲ್ಲಿ ನನಗೆ ನಂಬಿಕೆ ಇಲ್ಲ. ತಮ್ಮ ಪ್ರಣಾಳಿಗೆ ಒಳಪಡದವರನ್ನು ಸಕ್ರಿಯವಾದಿಗಳು ಬೂರ್ಜ್ವಾ, ಬಲಪಂಥೀಯ ಎಂಬ ಹೆಸರುಗಳಿಂದ ಹಳಿಯುತ್ತಾರೆ; ಸಾಮಾಜಿಕ ಸಮಸ್ಯೆಗಳು ಒಂದೆರಡು ದಶಕಗಳಲ್ಲಿ ಬದಲಾಗಿ, ಅವುಗಳಿಗೆ ಪರಿಹಾರವೆಂಬಂತೆ ಬರೆಯುವ ಸಾಹಿತ್ಯವು ಅನಂತರ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತದೆಂಬುದನ್ನು ಅವರು ಅರ್ಥ ಮಾಡಿಕೊಳ್ಳುವುದಿಲ್ಲ. ಉದ್ದಕ್ಕೂ ನಾನು ಗಟ್ಟಿಯಾಗಿ ನಿಂತು ನನ್ನ ಬೌದ್ಧಿಕ ಮತ್ತು ಸೃಷ್ಟಿಶೀಲತೆಯ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದೇನೆ.

ಸರಸ್ವತೀ ಸಮ್ಮಾನವು ನನ್ನ ಇತ್ತೀಚಿನ ಕೃತಿಗಳಲ್ಲಿ ಮಂದ್ರವನ್ನು ಆರಿಸಿರುವುದು ನನಗೆ ಸಂತೋಷವನ್ನುಂಟು ಮಾಡಿದೆ. ಒಬ್ಬ ಸಂಗೀತಗಾರ, ಅವನ ಸುತ್ತಮುತ್ತಣ ಘಟನೆ ಹಾಗು ಪಾತ್ರಗಳ ಮೂಲಕ ಕಲೆಗೂ ಜೀವನದ ಇತರ ಮೌಲ್ಯಗಳಿಗೂ ಇರುವ ಸಂಬಂಧವನ್ನು ನಾನು ಈ ಕಾದಂಬರಿಯಲ್ಲಿ ಅನ್ವೇಷಿಸಿದ್ದೇನೆ. ಇಡೀ ಕಾದಂಬರಿಯಲ್ಲಿ ಸಂಗೀತವೇ ಒಂದು ಮುಖ್ಯ ಪಾತ್ರವಾಗಿದೆ. ಸಂಗೀತವೇ ಅತ್ಯಂತ ಶುದ್ಧವಾದದ್ದು. ಇತರ ಕಲೆಗಳಾದ ಚಿತ್ರ, ಶಿಲ್ಪ, ಸಾಹಿತ್ಯ ಮೊದಲಾದವುಗಳ ತುಲನೆಯಲ್ಲಿ ಭಾವ ಮತ್ತು ರಸಗಳನ್ನು ಪರಿಶುದ್ಧ ಅಂದರೆ ಹಸಿಯಾದ, ಅತ್ಯಂತ ಶಕ್ತವಾದ ಸ್ವರೂಪದಲ್ಲಿ ವ್ಯಕ್ತಪಡಿಸುವಂಥದು. ಅದು ಎಲ್ಲ ಮೂಲ ಮತ್ತು ಮಿಶ್ರ ರಸಗಳನ್ನು ಸೃಷ್ಟಿಸಿಕೊಂಡು ಮಂದ್ರದ ಆಳದಿಂದ ತಾರತಾರದ ಎತ್ತರಕ್ಕೆ ಸಂಚರಿಸುತ್ತದೆ. ಮಂದ್ರವು ಸಮಗ್ರ ಅಂತರ್ಮುಖತೆಯ ಸ್ಥಿತಿ ; ಎಂದರೆ ಧ್ಯಾನ.

**ನಮಸ್ಕಾರ.**



# ವಾರ್ತಾ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯೋತ್ಸವ

## ಗುರ್‌ಗಾಂವ್‌ನಲ್ಲಿ ಮೊಳಗಿದ ಕನ್ನಡದ ಕಹಳೆ




ಹರಿಯಾಣ ರಾಜ್ಯದ ಗುರ್‌ಗಾಂವ್‌ನಲ್ಲಿ ಕನ್ನಡದ ಕಹಳೆ ಮುಗಿಲು ಮುಟ್ಟಿತ್ತು. ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ ಹಾಗೂ ಗುರ್‌ಗಾಂವ್ ಕನ್ನಡ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹೊರನಾಡ ಕನ್ನಡಿಗರಿಗೆ ನಾಡು-ನುಡಿಯ ಬಗ್ಗೆ ಮತ್ತು ಕಲೆ-ಸಂಸ್ಕೃತಿಯನ್ನು ಪರಿಚಯಿಸುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಅಂಗವಾಗಿ ಈ ಕಾರ್ಯಕ್ರಮವು ಗುರ್‌ಗಾಂವ್‌ನಲ್ಲಿ ಅದ್ದೂರಿಯಾಗಿ ನಡೆಯಿತು.

ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಮಾಜಿ ಪ್ರಧಾನ ವಾರ್ತಾಧಿಕಾರಿ, ಐ. ರಾಮಮೋಹನ ರಾವ್ ಅವರು ಉದ್ಘಾಟಿಸಿದರು. ಪ್ರತಿಯೊಬ್ಬರೂ ಮಾತೃಭಾಷೆ ಮತ್ತು ಮಾತೃಭೂಮಿಯನ್ನು ಸದಾ ಗೌರವಿಸಬೇಕು. ವಾರ್ತಾ ಇಲಾಖೆ ಪ್ರತಿವರ್ಷ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಹೊರನಾಡಿನಲ್ಲೂ ಹಮ್ಮಿಕೊಳ್ಳುವ ಮೂಲಕ ಹೊರನಾಡ ಕನ್ನಡಿಗರು ತಾಯಿನಾಡಿನಿಂದ ಸಾವಿರಾರು ಮೈಲಿ ದೂರದಲ್ಲಿದ್ದರೂ ಸಹ ಕರ್ನಾಟಕದ ಸಂಸ್ಕೃತಿಯಿಂದ ದೂರವಾಗದಂತೆ ಭಾವನೆ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದ ವಿಶೇಷ ಅತಿಥಿಯಾಗಿ ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಖ್ಯಾತ ನೃತ್ಯಪಟು ಶುಭಾ ಧನಂಜಯ ಅವರು ಪಾಲ್ಗೊಂಡಿದ್ದರು. ಗುರ್‌ಗಾಂವ್ ಕನ್ನಡ ಸಂಘದ ಅಧ್ಯಕ್ಷ, ಸಾಯಿಪ್ರಸಾದ್ ಹೆರಾಂಜಲ್ ಅವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ವಾರ್ತಾ ಕೇಂದ್ರದ ಪ್ರಭಾರ ಉಪನಿರ್ದೇಶಕ ಗಿರೀಶ್ ಎಲ್.ಪಿ. ಅವರು ಸ್ವಾಗತಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀನಿವಾಸ್ ಜಿ. ಕಪ್ಪಣ್ಣ ಅವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ಕರ್ನಾಟಕದ ಪ್ರಸಿದ್ಧ ಕಲಾವಿದರಿಂದ ತರಬೇತಿ ಪಡೆದ ದೆಹಲಿಯ ಕಲಾವಿದರು ರಂಗ ಗೀತೆ, ಜಾನಪದ ಗೀತೆ, ಕೋಲಾಟ, ಕಂಸಾಳೆ, ಲಂಬಾಣಿ ನೃತ್ಯ, ಸಮೂಹ ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಹೊರನಾಡ ಕನ್ನಡ ಪ್ರೇಕ್ಷಕರಷ್ಟೇ ಅಲ್ಲದೇ, ಈ ಕಾರ್ಯಕ್ರಮಕ್ಕೆ ಆಗಮಿಸಿದ್ದ ಇತರೆ ಭಾಷೆಯ ಜನರು ಸಹ ಹಾಡಿಗೆ ತಲೆದೂಗಿ, ನೃತ್ಯಕ್ಕೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಈ ವೇಳೆ ಗುರ್‌ಗಾಂವ್‌ನ ಹೊರನಾಡ ಕನ್ನಡಿಗರು ಮತ್ತು ಅವರ ಮಕ್ಕಳು ಸಹ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಇಲಾಖಾ ಮೂಲಕ ಏರ್ಪಡಿಸಿದ್ದ ರಾಜ್ಯ ಸರ್ಕಾರದ ಸಾಧನೆ ಹಾಗೂ ಪ್ರಗತಿ ಬಿಂಬಿಸುವ ವಸ್ತು ಪ್ರದರ್ಶನ ಮಳಿಗೆ ನೋಡುಗರ ಗಮನ ಸೆಳೆಯಿತು.



# ರಾಜಧಾನಿಯಲ್ಲಿ ಭೃಂಗದ ಬೆನ್ನೇರಿ ಬಂದ ಕವಿಋಷಿ ದ.ರಾ.ಬೇಂದ್ರೆ–ನೆನಪು

*‘ಕರ್ನಾಟಕದ ರವೀಂದ್ರರು’ ಎಂಬ ಕವಿಋಷಿ ವಾಣಿಯಂತೆ ‘ಬೇಂದ್ರೆ’ ಹೆಸರೇ ಒಂದು ಮಾಯಕ ಸೆಳೆತ. ಅವರ ಕಾವ್ಯದ ಮೂಲವೇ ನಾದ. ಕಾವ್ಯ ಮಾಂತ್ರಿಕತೆ ಗುಂಗು ಹಿಡಿಸುವ ನಾದಮಯತೆ, ಮಿಂಚಿನ ಅಭಿವ್ಯಕ್ತಿ, ಅಪ್ಪಟ ದೇಸಿ ಗತ್ತು ತಾಕತ್ತುವುಳ್ಳ ‘ಅಂಬಿಕಾತನಯದತ್ತ’ ರಿಗೆ ಅವರ ಬದುಕಿನ ಸಂದರ್ಭದಲ್ಲಿ ಮೂಡಿದ ದರ್ಶನಗಳು ಚಿಂತನೆಯ ನೆಲೆಯನ್ನು ಗಟ್ಟಿಗೊಳಿಸಿದವು. ಈ ದರ್ಶನವೇ ಅವರ ಕಾವ್ಯಾತ್ಮಕ ಪ್ರಜ್ಞೆಯ ಫಲಿತಾಂಶ. ಅನುಭಾವದೆತ್ತರಕ್ಕೆ ಕಲ್ಪನೆಯ ನಂಟಿನಿಂದ ಏರುವ ಬೇಂದ್ರೆ ಇಹದ ನಂಟನ್ನು ಬಿಡುವುದಿಲ್ಲ. ಕಟ್ಟಿಕೊಂಡ ಲೋಕದ ಗಂಟನ್ನು ಸಡಿಲಗೊಳಿಸುವುದಿಲ್ಲ. ಓದುಗನಿಗೆ ಶಾಂತಿರಸವನ್ನು ಪ್ರೀತಿಯಿಂದ ಮೈದೋರಿದ ಗಾರುಡಿಗತನ ಬೇಂದ್ರೆಯವರದು. ಈ ಮಾಂತ್ರಿಕ ಕವಿಯ ಸ್ಮರಣಾರ್ಥ ನವೆಂಬರ್ 5 ಮತ್ತು 6 ರಂದು ರಾಷ್ಟ್ರದ ರಾಜಧಾನಿಯಲ್ಲಿ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ದೆಹಲಿ ಕರ್ನಾಟಕ ಸಂಘ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಸಹಯೋಗದಲ್ಲಿ “ವರಕವಿ ಬೇಂದ್ರೆ–ನೆನಪು” ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು. ವರಕವಿ ಬೇಂದ್ರೆ ಅವರನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸುವ ಹಾಗೂ ಅವರ ವೈಚಾರಿಕ ಸ್ವರಮಂಡಲದ ನಾಲ್ಕು ತಂತಿಗಳನ್ನು ಮೀಟುವ ಮೂಲಕ ಎರಡು ದಿನಗಳ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು.*



ನವೆಂಬರ್ 5, ಸಾಯಂಕಾಲ ಸಂಘದ ಸಭಾಂಗಣದಲ್ಲಿ ‘ವರಕವಿ ದ.ರಾ. ಬೇಂದ್ರೆ–ನೆನಪು’ ಕಾರ್ಯಕ್ರಮವನ್ನು ನಾಡಿನ ಮಹತ್ವದ ಕವಿ, ಎಚ್.ಎಸ್. ವೆಂಕಟೇಶ ಮೂರ್ತಿಯವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ಬೇಂದ್ರೆ ಕಾವ್ಯದ ಮುಖಾಮುಖಿಯಾದ ಸ್ಮರಣೆಗಳನ್ನು ಹಂಚಿಕೊಂಡ ಎಚ್.ಎಸ್. ವೆಂಕಟೇಶ ಮೂರ್ತಿ ವರಕವಿ ಬೇಂದ್ರೆ ಕಾವ್ಯ ಅವರ ಬದುಕಿನ ನೋವು, ನಲಿವು, ವೈಯಕ್ತಿಕ ಅನುಭವಗಳಿಂದ ಕೂಡಿದುದ್ದಾಗಿವೆ. ಇಲ್ಲಿ ಅರ್ಥ ಮುಖ್ಯವಲ್ಲ ಅನುಭವ ಮುಖ್ಯ ಎಂದ ಅವರು ಬೇಂದ್ರೆ ಕವಿ ಮಾತ್ರ ಆಗಿರದೇ ಸ್ವಾನುಭವವುಳ್ಳ ಸಮರ್ಥ ಹಾಡುಗಾರ ಕೂಡ ಎಂದು ನೆನೆದರು. “ಬೇಂದ್ರೆ ಅವರು ಕಳೆದ ಶತಮಾನದ ಸಾಹಿತ್ಯ ಸಂದರ್ಭದ ವಿಸ್ಮಯ. ರಸಪ್ರಜ್ಞೆಯೇ ಅವರ ಕವಿತೆಗಳ ಮಹತ್ವದ ಗುಣ ಕೇವಲ ಕಥನ ಮಾತ್ರವಲ್ಲದೇ ಭಾವನಾ ಪ್ರಧಾನವಾದ ಹೊಸ ಲಯವನ್ನು ಸೃಷ್ಟಿಸಿದ ಏಕೈಕ ಶುಬ್ಧಾಂದ ಭಾವಗೀತಕಾರ. ಅವರ ಖಾಸಗಿ ಬದುಕಿನ ಕ್ಷಣಗಳು ಶ್ರೇಷ್ಠ ಕಾವ್ಯಕ್ಕೆ ಮುನ್ನುಡಿ ಬರೆದಿವೆ” ಎಂದು ಬೇಂದ್ರೆಯವರ ವ್ಯಕ್ತಿತ್ವದ ಮಜಲುಗಳನ್ನು ತೆರೆದಿದ್ದಟ್ಟರು.

ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಅಧಿಕಾರಿ ಪ್ರಕಾಶ ಬಾಳಿಕಾಯಿ ಟ್ರಸ್ಟ್‌ನ ಪ್ರಗತಿ ಮತ್ತು ಪರಿಚಯ ಕುರಿತು ಮಾತನಾಡಿದರು ಹಾಗೂ ಟ್ರಸ್ಟ್‌ನ ಪರವಾಗಿ ದ.ರಾ.ಬೇಂದ್ರೆ ವರ್ಣಚಿತ್ರವನ್ನು ದೆಹಲಿ ಕರ್ನಾಟಕ ಸಂಘಕ್ಕೆ ನೆನಪಿನ ಕಾಣಿಕೆಯಾಗಿ ನೀಡಿದರು.

ಕನ್ನಡದ ಖ್ಯಾತ ಲೇಖಕ, ವಿಮರ್ಶಕ ಡಾ. ಎಚ್.ಎಸ್. ರಾಘವೇಂದ್ರ ರಾವ್ ತಮ್ಮ ಆಶಯ ಭಾಷಣದಲ್ಲಿ “ಕಾವ್ಯವೆಂದರೆ ಕನ್ನಡವು ಕನ್ನಡವನ್ನು ಕನ್ನಡಿಸುತ್ತಿರಬೇಕು. ಕವಿಯಾದವನು ಈ ಕ್ಷಣದ ಸತ್ಯಗಳನ್ನು ಕಟ್ಟಿಕೊಟ್ಟಿದ್ದರೂ ಸಹ ಅವು ಸಾವಿರದ ಕವನಗಳು. (ಸಾವು ಇರದ ಕವನ) ಬೇಂದ್ರೆ ಅವರು ಎಂಭತ್ತು ವರ್ಷಗಳ ಹಿಂದೆ ಬರೆದ ಕವಿತೆಗಳು ಇಂದಿಗೂ ಹೊಸ ಅರ್ಥವನ್ನು ಹುಟ್ಟಿಸುತ್ತದೆ. ಅವರ ಕವನಕ್ಕಿರುವುದು ಒಂದಲ್ಲ ಸಾವಿರ ಅರ್ಥಗಳು. ಅವು ಕಾಲಾಂತರದಲ್ಲಿ ಬದಲಾಗುತ್ತಲೇ ಇರುವಂತಹವು” ಎಂದು ಬೇಂದ್ರೆ ಕಾವ್ಯದ ಹರವು, ಆಳ ಸಮಗ್ರತೆಯ ಕುರಿತು ವಿದ್ವತ್ಪೂರ್ಣವಾಗಿ ಮಾತನಾಡಿದರು.

ಪದಗಳಿಗೆ ಲಯ ಸೃಷ್ಟಿಸುವುದಲ್ಲ, ಲಯಕ್ಕನುಗುಣವಾಗಿ ಪದಗಳನ್ನು ಸೃಷ್ಟಿಸಿದ ಅಪರೂಪದ ಕವಿ ಬೇಂದ್ರೆ ಅವರ ಕಾವ್ಯ ಯಾವತ್ತೂ ಭಾಷಣ ಮಾಡುವುದಿಲ್ಲ. ಓದುಗಬ್ಬದ ಪರಂಪರೆಯಲ್ಲದ ಹಾಡುಗಬ್ಬದ ಪರಂಪರೆಯನ್ನು ಬೇಂದ್ರೆ ಅವರು ಅನನ್ಯವಾಗಿಸಿದರು. ಅವರ ಪ್ರತಿಯೊಂದು ಕವಿತೆಯೂ ಛಂದೋರೂಪದಲ್ಲಿದೆ ಮತ್ತು ಅವರ ಕಾವ್ಯ ಸಂಗೀತಕ್ಕೆ, ಛಂದೋಬದ್ಧಕ್ಕೆ ತಾನೇ ತಾನಾಗಿ ಮಣಿಯುವಂಥದ್ದು. ಕನ್ನಡದಲ್ಲಿ ಶಿಷ್ಟ ಛಂದೋರೂಪವನ್ನು ಬಳಸಿ ಕವನಗಳನ್ನು ರಚಿಸಿದವರಲ್ಲಿ ಬೇಂದ್ರೆ ಪ್ರಮುಖರಾಗಿದ್ದಾರೆ ಎಂಬುದಾಗಿ ಡಾ. ಎಚ್.ಎಸ್.ರಾಘವೇಂದ್ರ ರಾವ್ ಅಭಿಪ್ರಾಯಪಟ್ಟರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡುತ್ತಾ ಇತ್ತೀಚೆಗೆ ತಾವು ಧಾರವಾಡದ ಸಾಧನಕೇರಿಯ ವರಕವಿ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗೆ ಭೇಟಿ ನೀಡಿದ್ದು, ತಮ್ಮ ಭೆಟ್ಟಿ, ರಾಷ್ಟ್ರದ ರಾಜಧಾನಿಯಲ್ಲಿ ಬೇಂದ್ರೆ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳುವ ತಮ್ಮ ಬಹುದಿನದ ಕನಸನ್ನು ನನಸಾಗಿಸಿದ ಟ್ರಸ್ಟ್‌ನ ಅಧ್ಯಕ್ಷ ಡಾ. ಶ್ಯಾಮಸುಂದರ್ ಬಿದರಕುಂದಿಯವರಿಗೆ ಧನ್ಯವಾದಗಳನ್ನರ್ಪಿಸಿ, ಅವರು ಅನಾರೋಗ್ಯದ ಕಾರಣ ಈ ಸಂಕಿರಣದಲ್ಲಿ ಭಾಗವಹಿಸದಿದ್ದುದರ ಕೊರತೆಯನ್ನು ನೆನೆಯುತ್ತಾ, ಬಿದರಕುಂದಿ ಅವರ ಸಂದೇಶವನ್ನು ವಾಚಿಸಿದರು. ತಮ್ಮ ಕಾಲೇಜು ದಿನಗಳಲ್ಲಿ ಬೇಂದ್ರೆ ಕವನಗಳನ್ನು ಅರ್ಥೈಸಿಕೊಳ್ಳುವ ಮನೋಸ್ಥಿತಿಯನ್ನು ಸಿದ್ಧಗೊಳಿಸಿದವರು ತಮ್ಮ ಗುರುಗಳಾದ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಎಂದು ನೆನೆದರು.



ಸಂಘಕ್ಕೆ ವರಕವಿ ಬೇಂದ್ರೆ ಅವರ ಭಾವಚಿತ್ರ



ಚಂದ್ರಶೇಖರ ಕೆದಿಲಾಯ ಅವರಿಂದ ಬೇಂದ್ರೆ ಗೀತಗಾಯನ



ಉದ್ಘಾಟನಾ ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ನಿರೂಪಿಸಿದರು. ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ವಂದಿಸಿದರು.

ಆನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ –ಖ್ಯಾತ ಗಮಕ ವಿದ್ವಾಂಸ ಹಾಗೂ ಗಾಯಕ ಎಚ್. ಚಂದ್ರಶೇಖರ ಕೆದಿಲಾಯ ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ, ಕುಣಿಯೋಣು ಬಾರ, ವರದಾ ತಗಣಿ ವರದಾ, ಸ್ವಾತಂತ್ರ್ಯ ವರ್ಧಂತಿ ಮೊದಲಾದ ಹಾಡುಗಳನ್ನು ತಮ್ಮ ಕಂಚಿನಕಂಠದಿಂದ ಹಾಡಿದರು. ರೂಪಶ್ರೀ–ಶಿಲ್ಪಶ್ರೀ ತಂಡ ಬೇಂದ್ರೆ ಗೀತೆಗಳನ್ನು ಹಾಡುವುದರ ಮೂಲಕ ನಾದಲೋಕಕ್ಕೆ ಕರೆದೊಯ್ದು ಸಭಿಕರನ್ನು ಮಂತ್ರಮುಗ್ಧಗೊಳಿಸಿದರು. ಜಂಟಿ ಕಾರ್ಯದರ್ಶಿ ಎನ್.ಆರ್.ಶ್ರೀನಾಥ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರ್ವಹಿಸಿದರು.

## ವಿಚಾರ ಗೋಷ್ಠಿ

ನವೆಂಬರ್ 6, ರವಿವಾರ ಬೆಳಗಿನ ಗೋಷ್ಠಿಯನ್ನು ಸ್ಥಳೀಯ ಕಲಾವಿದರು ಬೇಂದ್ರೆ ಹಾಡುಗಳ ಮೂಲಕ ಶುಭಾರಂಭ ಮಾಡಿದರು. ಬೆಂಗಳೂರಿನ ಖ್ಯಾತ ಲೇಖಕ ಡಾ. ಬಸವರಾಜ ಕಲ್ಗುಡಿ ಹಾಗೂ ಡಾ. ಸರ್ಫ್ರಾಜ್ ಚಂದ್ರಗುತ್ತಿ ಅವರು ಭಾಗವಹಿಸಿದ್ದ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಪುರುಷೋತ್ತಮ ಬಿಳಿಮಲೆ ಅವರು ವಹಿಸಿದ್ದರು.



ಡಾ. ಬಸವರಾಜ ಕಲ್ಗುಡಿ

‘ಬೇಂದ್ರೆಯವರು ಗ್ರಹಿಸಿದ ನವೋದಯದ ಮುಖ್ಯ ಪರಿಕಲ್ಪನೆಗಳ ಕುರಿತು ಮಾತನಾಡಿದ ಡಾ. ಬಸವರಾಜ ಕಲ್ಗುಡಿಯವರು 18–19ರ ಶತಮಾನ ಒಂದು ರೀತಿ ಕತ್ತಲಯುಗಕ್ಕೆ ದೊಡ್ಡ ಪಡೆನುಡಿಯಾಗಿದೆ. ಆ ಕಾಲದಲ್ಲಿದ್ದ ಅಲೆಮಾರಿ ಸ್ವರವಚನಕಾರರು ಸೂಫಿ ಸಂತರ ಪರಂಪರೆ, ವಚನಕಾರರ ಪರಂಪರೆ, ಕಂದಾಚಾರದ ಪರಂಪರೆಯನ್ನು ಒಡೆಯುವ ಕೆಲಸವನ್ನು ಮಾಡಿದ ರೀತಿಯನ್ನು ವಿವರಿಸುತ್ತಾ ಬೇಂದ್ರೆಯವರನ್ನು ‘ಪ್ಲೇಟೋ’ಗೆ ಹೋಲಿಸಿದರು. “ಹಾವ ತುಳಿದೇನ–ಮಾನಿನಿ ಹಾವ ತುಳಿದೇನ”, “ಗಿರಣಿಯ ವಿಸ್ತಾರ ನೋಡಮ್ಮ ಇದರ ಪರಾಕು ನೋಡಮ್ಮ” ಎಂದ ಸಂತರು – ಉಪಭೋಗ ಸಂಸ್ಕೃತಿಯನ್ನು ಒಡೆದು ಪರಿವರ್ತನೆಯ ಲೋಕವನ್ನು ಕಟ್ಟಿಕೊಡುವ ಕಾರ್ಯಮಾಡಿದರು. ಆಧುನಿಕ ಕವಿಗಳು, ಅರವಿಂದ, ಟ್ಯಾಗೋರರಂಥ ಚಿಂತಕರು, ಪರಮಹಂಸರು ಅನುಭಾವ ಎನ್ನುವುದನ್ನು ಎಚ್ಚರವೆಂದರೆ, ಪಶ್ಚಿಮದವರು ನಿಗೂಢವಾದದ್ದು ‘ಅನುಭಾವ’ ಎಂದು ಪರಿಗಣಿಸಿದರು. ರವೀಂದ್ರನಾಥ ಟ್ಯಾಗೋರರನ್ನು ಗಂಭೀರವಾಗಿ ಪರಿಗಣಿಸಿದವರು ಪಶ್ಚಿಮದ ಜರ್ಮನ್ನರು. ಬೇಂದ್ರೆ ಕಾವ್ಯಕ್ಕೆ ಕುವೆಂಪು ದರ್ಶನ ದಾರ್ಷ್ಟ್ಯ ಇರಲಿಲ್ಲ. ಪಾಡು ಹಾಡಾಗುವುದು ದೊಡ್ಡ ವಿಷಯ. ಪಟ್ಟಪಾಡನ್ನು ರಸಾನ್ವಿತವಾಗಿಸುವುದನ್ನು ಬೇಂದ್ರೆ ಅರಿತಿದ್ದರು. ರಸದ ಕಲ್ಪನೆ, ಲೋಕದ ಮೂಲದ್ರವ್ಯವನ್ನು ಸಹಿಸುವ ಶಕ್ತಿಯನ್ನು ಕೊಡುತ್ತದೆಂಬ ಬೇಂದ್ರೆ ಅನುಭಾವದ ಕಾವ್ಯಾತ್ಮಕ ಪ್ರಜ್ಞೆಯ ಕುರಿತು ಕಲ್ಗುಡಿ ಮಾತನಾಡಿದರು.



ಡಾ. ಸರ್ಫ್ರಾಜ್ ಚಂದ್ರಗುತ್ತಿ

“ಬೇಂದ್ರೆ ಕಾವ್ಯದ ಸಂಗೀತ ಮಾರ್ಗ” ದ ಕುರಿತು ಡಾ. ಸರ್ಫ್ರಾಜ್ ಚಂದ್ರಗುತ್ತಿಯವರು ತಮ್ಮ ವಿಚಾರವನ್ನು ಮಂಡಿಸುತ್ತ ಬೇಂದ್ರೆ ಕಾವ್ಯ ಮತ್ತು ನಾದಕ್ಕಿರುವ ಸಂಬಂಧವನ್ನು ‘ನಾದಬೇಕು, ನಾದಬೇಕು, ನಾದಾನ ನಾದಬೇಕು’ ಎಂಬ ಬೇಂದ್ರೆಯವರ ಮಾತುಗಳಲ್ಲೇ ವಿವರಿಸಿದರು. ಬೇಂದ್ರೆ ತಮ್ಮ ಕವಿತೆಯನ್ನು ಹಾಡುತ್ತಿದ್ದರು ಮತ್ತು ಕವಿತೆ ಹಾಡಾಗುವುದನ್ನು ಒಪ್ಪಿದ್ದರು. ಬೇಂದ್ರೆ ಅವರಿಗೆ ನಾದದ ಬಗ್ಗೆ ಅದಮ್ಯ ಪ್ರೀತಿ ಇತ್ತು. ನಾದದ ಹೊರತು ಬೇಂದ್ರೆ ಇಲ್ಲ. ಕವಿತೆಯ ಆಳದಲ್ಲಿ ಸಂಗೀತವಿದೆ. ಅದನ್ನು ಹೆಕ್ಕಿ ತೆಗಿಯಬೇಕು ಎಂಬ ತತ್ವ ಬೇಂದ್ರೆಯವರದಾಗಿತ್ತು. ಬೇಂದ್ರೆ ಅವರಿಗೆ ಪೂರ್ವಜನ್ಮದಲ್ಲಿ ನಂಬಿಕೆಯಿತ್ತು ಎಂದು ಹೇಳಿದ ಸರ್ಫ್ರಾಜ್ – ಬೇಂದ್ರೆ ಅವರ ಕಾವ್ಯದ ಮುನ್ನ ಸಂಗೀತದ ಮಟ್ಟು ತಯಾರಾಗುತ್ತದೆ, ನಂತರ ಸಾಹಿತ್ಯ ಬೆನ್ನು ಹತ್ತುತ್ತದೆ. ಬೇಂದ್ರೆ ಕಾವ್ಯದಲ್ಲಿ ಭೃಂಗ, ಕೋಗಿಲೆ ಇವೆಲ್ಲ ನಾದದ ರೂಪಕಗಳು. ನಾದವನ್ನು ಪ್ರತ್ಯೇಕಿಸಿ ಬೇಂದ್ರೆ ಕಾವ್ಯವನ್ನು ನೋಡಲು ಸಾಧ್ಯವಿಲ್ಲ ಎಂದ ಅವರು ಸಾಮಾನ್ಯ ಮನುಷ್ಯರಿಗೆ ಬೇಂದ್ರೆ ತಲುಪಿದ್ದು ಹಾಡುಗಾರಿಕೆ ಮೂಲಕ. ಮಾತಿಗೆ ನಿಲುಕದ ಬೇಂದ್ರೆ ಹಾಡಿಗೆ–ನಾದಕ್ಕೆ ದಕ್ಕುತ್ತಾರೆ. ಬೇಂದ್ರೆ ಕಾವ್ಯವನ್ನು ನಾದದ ಮುಖೇನವೇ ಅರ್ಥಮಾಡಿಕೊಳ್ಳಬೇಕು ಎಂದರು.



ಡಾ. ಪುರುಷೋತ್ತಮ ಬಿಳಿಮಲೆ

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಾ. ಪುರುಷೋತ್ತಮ ಬಿಳಿಮಲೆ ಅವರು ನವೋದಯ ಸಂದರ್ಭದಲ್ಲಿ ಬೇಂದ್ರೆ ಅವರು ಬಹಳ ಮುಖ್ಯ ಕವಿ. ವಸಾಹತು ಕಾಲದ ಉದೀಯಮಾನ ಮಧ್ಯಮ ವರ್ಗ ಬುದ್ಧಿಜೀವಿಗಳ ವರ್ಗವು ಪೂರ್ತಿ ಕ್ರಾಂತಿಕಾರಿಯೂ ಅಲ್ಲದ, ಪೂರ್ತಿ ಪಾರಂಪರಿಕವೂ ಅಲ್ಲದ ಮಧ್ಯಮ ಮಾರ್ಗವನ್ನು ಹಿಡಿದು ಬರೆದರು. . ಬೇಂದ್ರೆ ದೊಡ್ಡ ಕವಿಯಾದರೂ ದೇಶಕ್ಕೆ ಗೊತ್ತಿಲ್ಲ, ಆದರೆ ರವೀಂದ್ರ ದೇಶಕ್ಕೆ ಗೊತ್ತಿದೆ. ಬೇಂದ್ರೆ ಸ್ಮಾರಕ ಟ್ರಸ್ಟ್ ಈ ಬಗ್ಗೆ ಕೆಲಸ ಮಾಡಬೇಕು. ಜೊತೆಗೆ ಬೇಂದ್ರೆ ಕಾವ್ಯ ಗಮಕದಲ್ಲಿ, ಜಾನಪದದಲ್ಲಿ ವಿಸ್ತಾರಗೊಂಡ ಬಗೆಗೆ ವಿಮರ್ಶೆ ಆಗಬೇಕು ಎಂಬುದಾದ ಕಳಕಳಿಯ ಮಾತನ್ನು ಹೇಳಿದರು.

ಸಂಘದ ಸಾಹಿತ್ಯ ಸಮಿತಿಯ ಸಂಚಾಲಕ ಪಿ.ಸಿ.ಶ್ರೀನಿವಾಸ ಗೋಷ್ಠಿಯನ್ನು ನಿರ್ವಹಿಸಿದರು.



ಎಚ್. ಚಂದ್ರಶೇಖರ ಕೆದಿಲಾಯ

ಭೋಜನ ವಿರಾಮದ ನಂತರ ದೆಹಲಿ ಕಲಾವಿದ ಅಶೋಕ ಕುಂಬಾರ ಅವರು ‘ಅಂತರಂಗದ ಮೃದಂಗ’. . .ಹಾಡಿನ ಮೂಲಕ ಎರಡನೇ ಗೋಷ್ಠಿಗೆ ಚಾಲನೆ ನೀಡಿದರು. “ಬೇಂದ್ರೆ ಕವಿತೆ–ಗಮಕ ರೂಪ” ಕುರಿತು ಗಮಕ, ಗಾಯಕ ಎಚ್. ಚಂದ್ರಶೇಖರ ಕೆದಿಲಾಯ ಮಾತನಾಡಿದರು. ಸಂಗೀತದ ಸಂಯೋಜನೆಯೊಂದಿಗೆ ಕಾವ್ಯವನ್ನು ಹಾಡುವುದಕ್ಕೆ ಗಮಕರೂಪವೆನ್ನುತ್ತಾರೆ. ಗಮಕ ಕಾವ್ಯದ ಭಾವನೆಯನ್ನು ಓದುಗನಿಗೆ / ಕೇಳುಗನಿಗೆ ತಂದು ನೀಡುತ್ತಾನೆ. ಇಡೀ ಪ್ರಕೃತಿಯಲ್ಲಿ ನಾದವಿದೆ. ಅದು ನಮ್ಮೆಲ್ಲರಲ್ಲೂ ಇದೆ ಎಂದ ಕೆದಿಲಾಯ ಅವರು ರಾಗ–ಭಾವಗಳು ಸಾಹಿತ್ಯಕ್ಕೆ ಹೊಂದಿಕೊಂಡಾಗ ಜೀವ ತಾದ್ಯಾತ್ಮವಾಗುವ ಸಾಲುಗಳನ್ನು ವಿವರಿಸಿ ಮೇಘದೂತದಲ್ಲಿ ಬರುವ ಕೆಲವು ವೃತ್ತಗಳನ್ನು ಹಾಡಿ ರಂಜಿಸಿದರು.



ಡಾ. ಟಿ.ಎಸ್. ಸತ್ಯನಾಥ್

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ದೆಹಲಿ ವಿಶ್ವವಿದ್ಯಾಲಯದ ಅಧ್ಯಾಪಕ ಡಾ. ಟಿ.ಎಸ್. ಸತ್ಯನಾಥ್ ಅವರು ಮಾತನಾಡುತ್ತಾ ಬೇಂದ್ರೆ ಕಾವ್ಯದ ಪರಿಕರಗಳನ್ನು ಹುಡುಕುವಾಗ ನಾದದ ಹಿನ್ನಲೆಯಲ್ಲಿ–ಸಂಗೀತ ಹಿನ್ನಲೆಯಲ್ಲಿ ಬೇಂದ್ರೆಯವರನ್ನು ಅರ್ಥೈಸಿಕೊಳ್ಳುವುದು ಹೆಚ್ಚು ಸಮರ್ಪಕವಾಗುವುದೆಂಬ ವಿಚಾರವನ್ನು ಸ್ಥೂಲವಾಗಿ ವಿವರಿಸಿದರು. ಭಾರತದ ಬಹುಭಾಷಿಕ ಸಂದರ್ಭದಲ್ಲಿ ಹಾಗೂ ತತ್ಪರಿಣಾಮವಾಗಿ ರೂಪುಗೊಂಡಿರುವ ಹೈಬ್ರಿಡಿಟಿಯನ್ನೊಳಗೊಂಡ ಕನ್ನಡದ ಬರಹ ಸಂಸ್ಕೃತಿಯಲ್ಲಿ ಒಂದತ್ತ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳ ಸಂಮಿಶ್ರ ಕೃತಿಗಳನ್ನೂ ಇನ್ನೊಂದತ್ತ ಬಹುಮುಖಾತ್ಮಕ ಪ್ರತಿನಿಧೀಕರಣಗಳನ್ನು – ಲಿಪಿಕೇಂದ್ರಿತ (ಹಸ್ತಪ್ರತಿ), ಧ್ವನಿಕೇಂದ್ರಿತ (ಮೌಖಿಕ) ಮತ್ತು ದೇಹಕೇಂದ್ರಿತ (ಪ್ರದರ್ಶನ) – ನಾವು ವ್ಯಾಪಕವಾಗಿ ಕಾಣುತ್ತೇವೆ. ಪಾರಂಪರಿಕ ಮಧ್ಯಕಾಲೀನ ಮುದ್ರಿತ ಕೃತಿಗಳು ಬಂದ ನೂರೈವತ್ತು ವರ್ಷಗಳ ನಂತರವೂ ಸಾಂಸ್ಕೃತಿಕವಾಗಿ ಹೈಬ್ರಿಡಿಟಿ ಮತ್ತು ಬಹುಮುಖಿ ಪ್ರತಿನಿಧೀಕರಣಗಳು ನಮ್ಮ ನಡುವೆ ಉಳಿದುಕೊಂಡು ಬಂದಿವೆ. ಇಂಥ ಕನ್ನಡ ಕಾವ್ಯ ಉದ್ಭವವಾದ ಸಮಯದಲ್ಲಿ ಸಾಹಿತ್ಯ, ಧ್ವನಿಯ ಸಮೀಕರಣ, ನಾಟ್ಯ ಸಂಗೀತದ ಈ ಹಿನ್ನೆಲೆಯಲ್ಲಿ ಬೇಂದ್ರೆ ಅವರನ್ನು ಕವಿಕೇಂದ್ರಿತ ಬೇಂದ್ರೆ, ಕೃತಿಕೇಂದ್ರಿತ ಬೇಂದ್ರೆಯೆಂದು ನೋಡಬಹುದು. ಉತ್ತರ ಕರ್ನಾಟಕದ ಆಡುಭಾಷೆಯ ಸೊಗಡಿನಲ್ಲಿ ಬೇಂದ್ರೆ ಕಾವ್ಯ, ಹೊಸ ಸಂಸ್ಕೃತಿಯ ಭಾಷಿಕ ಚಿಂತನೆಗಳಲ್ಲಿ ಹಾಡುಗಬ್ಬ ಮತ್ತು ಓದುಗಬ್ಬಗಳು ಕನ್ನಡಕಾವ್ಯವನ್ನು ರೂಪಿಸಿದ ಪ್ರಮುಖ ಪರಿಕಲ್ಪನೆಗಳು.

ನಂತರ ಗಿರೀಶ ಕಾರ್ನಡ್ ಅವರು ವರಕವಿ ಬೇಂದ್ರೆ ಜೀವನ ಕುರಿತು ನಿರ್ಮಿಸಿದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು.


ಓ.ಎಲ್. ನಾಗಭೂಷಣಸ್ವಾಮಿ

ಎರಡು ದಿನಗಳ ಕಾಲ ಬೇಂದ್ರೆ ಅವರ ಕಾವ್ಯನಾದವನ್ನೇ ಧ್ಯೇನಿಸಿದ ನಂತರ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಕನ್ನಡದ ಪ್ರತಿಷ್ಠಿತ ವಿಮರ್ಶಕರಾದ ಓ.ಎಲ್. ನಾಗಭೂಷಣಸ್ವಾಮಿ ಅವರು "ಎರಡು ದಿನಗಳ ಗೋಷ್ಠಿಯಲ್ಲಿ ಬೇಂದ್ರೆ ಅವರ ಕಾವ್ಯದ ಸಮಗ್ರ ಚಿಂತನೆ ನಡೆದಿದ್ದು ನಿಜಕ್ಕೂ ಸಂತಸ ತಂದಿದೆ. ಸಮಾರೋಪ ಎಂದರೆ ಅಂತ್ಯವಲ್ಲ. ಬೇಂದ್ರೆ ಕಾವ್ಯದ ಚಿಂತನೆಗೆ ಆರಂಭದ ಕಾಲ. ಅದು ನಿರಂತರವಾಗಿ ನಡೆಯುತ್ತಿರಬೇಕು" ಎಂದರು. ಕವಿಯಾದವನು ಭಾಷೆಯ ಮೂಲಕ ಹೊಸ ಲೋಕವೊಂದನ್ನು ಕಟ್ಟಿಕೊಡುತ್ತಾನೆ. ಚಿಲಿಯ ಖ್ಯಾತ ಕವಿ ಪ್ಯಾಬ್ಲೊ ನೆರುಡಾ ಐತಿಹಾಸಿಕ ಕವಿಯೆಂಬುದಾಗಿ ಸ್ಮರಿಸಿದ ಅವರು ಬೇಂದ್ರೆ ಕಾವ್ಯ ಶಕ್ತಿಯಲ್ಲಿ ಯಾವ ಕಡಿಮೆಯಿಲ್ಲ, ಆದರೆ ಅವರು ನೆರುಡಾನಂತೆ ಇತಿಹಾಸ ಸೃಷ್ಟಿಸಿಲ್ಲ ಕಾವ್ಯದೃಷ್ಠಿ ಮತ್ತು ತತ್ವನಿಷ್ಠೆಯಲ್ಲಿ ಪ್ರಪಂಚದ ಶ್ರೇಷ್ಠ ಕವಿಗಳಲ್ಲಿ ಅಂಬಿಕಾತನಯರೂ ಒಬ್ಬರು' ಎಂದು ನುಡಿದರು.


ನಂತರ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು "ಈ ಎರಡು ದಿನಗಳ ವಿಚಾರ ಸಂಕೀರ್ಣಗಳು ದ.ರಾ.ಬೇಂದ್ರೆ ಅವರನ್ನು ಅರ್ಥೈಸಿಕೊಳ್ಳುವಲ್ಲಿ ನೆರವಾಗಿದೆ. ದೆಹಲಿ ಕರ್ನಾಟಕ ಸಂಘದಲ್ಲಿ ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು. ಕನ್ನಡ ಸಂಸ್ಕೃತಿ ಪರಂಪರೆಯ ಸಂವೇದನೆಗಳು ಜಾಗತೀಕರಣದ ಯುಗದ ಪ್ರತಿಸಂಸ್ಕೃತಿಯ ಎಲ್ಲಾ ತಲ್ಲಣಗಳನ್ನು ಕೂಡ ಮೀರಿ ಬಹುಕಾಲ ಬಾಳುವಂಥವು. ಬೇಂದ್ರೆ ಸಮಗ್ರ ಸಾಹಿತ್ಯದ ಅನುವಾದಕ್ಕೆ ಧಾರವಾಡದ ಪರಿಸರವೇ ಉತ್ತಮವಾದುದು., ಬೇಂದ್ರೆ ಸ್ಮಾರಕ ಟ್ರಸ್ಟ್‌ಗೆ ಈ ದಿಸೆಯಲ್ಲಿ ಗುರುತರವಾದ ಹೊಣೆಗಾರಿಕೆಯಿದೆ' ಎಂಬ ಮಾತನ್ನು ನುಡಿಯುತ್ತಾ ಎಲ್ಲರಿಗೂ ವಂದನೆಗಳನ್ನರ್ಪಿಸಿದರು. ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ಕಾರ್ಯಕ್ರಮವನ್ನು ನಿರೂಪಿಸಿದರು


ಬೇಂದ್ರೆ ಗೀತಗಾಯನ ಕಾರ್ಯಕ್ರಮ ಪ್ರಸ್ತುತಪಡಿಸಿದ ದೆಹಲಿ ಕಲಾವಿದರು


ರೂಪಶ್ರೀ–ಶಿಲ್ಪಶ್ರೀ ಅವರಿಂದ ಬೇಂದ್ರೆ ಗೀತಗಾಯನ

ಹೀಗೆ ಎರಡು ದಿನಗಳ ಕಾಲ ನಡೆದ ವಿಚಾರ ಸಂಕಿರಣದಲ್ಲಿ ಸ್ಥಳೀಯ ಕಲಾವಿದರುಗಳಾದ ಟಿ.ಎಸ್.ರಮೇಶ್ ಮತ್ತು ತಂಡ, ಜನಕಪುರಿ ಮಹಿಳಾ ಮಂಡಳಿ ಹಾಗೂ ದೆಹಲಿ ಕನ್ನಡ ಲೇಡೀಸ ಅಸೋಷಿಯೇಷನ್‌ನ ಕಲಾವಿದೆಯರು ಉತ್ಸಾಹದಿಂದ ಭಾಗವಹಿಸಿ ಬೇಂದ್ರೆ ಗೀತೆಗಳನ್ನು ಭಾವಪೂರ್ಣವಾಗಿ ಹಾಡಿದರು. ತಬಲಾದಲ್ಲಿ ಕೇದಾರನಾಥ್ ಘೂಲಾರಿ, ಕೀ ಬೋರ್ಡನಲ್ಲಿ ಗಣೇಶ್ ಸಮರ್ಥ ಸಾಥ್ ನೀಡಿದರು. ಇನ್ಫೋಸಿಸ್ ಫೌಂಡೇಶನ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜನೆಯಲ್ಲಿ ರೂಪಶ್ರೀ –ಶಿಲ್ಪಶ್ರೀ ತಂಡ, ಮತ್ತು ಎಚ್.ಚಂದ್ರಶೇಖರ ಕೆದಿಲಾಯ ಅವರುಗಳ ಸುಮಧುರ ಬೇಂದ್ರೆ ಗಾಯನದಿಂದ 'ವರಕವಿ ದ.ರಾ ಬೇಂದ್ರೆ ನೆನಪು ಅರ್ಥಪೂರ್ಣವಾಗಿ ಕೊನೆಗೊಂಡಿತು.

■ ರೇಣುಕಾ ನಿಡಗುಂದಿ


ಬೇಂದ್ರೆ ಕಾರ್ಯಕ್ರಮಕ್ಕೆ ಆಗಮಿಸಿದ ಕರ್ನಾಟಕದ ವಿದ್ವಾಂಸರೊಂದಿಗೆ ದೆಹಲಿ ಕನ್ನಡಿಗರು

# ಕನ್ನಡವೇ ಶ್ರೇಷ್ಠ–ಸಾಂಸ್ಕೃತಿಕ ಸಂಜೆ



"ಭಾಷಾಭಿಮಾನವಿರಲಿ–ದುರಾಭಿಮಾನ ಬೇಡ. ಮಾತೃಭಾಷೆಯನ್ನು ಗೌರವಿಸಿ, ಉಳಿಸಿ, ಬೆಳೆಸಬೇಕಾದದ್ದು ಪ್ರತಿಯೊಬ್ಬ ಕನ್ನಡಿಗರ ಆದ್ಯ ಕರ್ತವ್ಯ. ಕನ್ನಡವೇ ಶ್ರೇಷ್ಠ ಎನ್ನುವ ಮಾತು ಅಕ್ಷರಶಃ ಸತ್ಯ" ಎನ್ನುವ ಮನದಾಳದ ಮಾತನ್ನು ನೆರೆದಿದ್ದ ಸಭಿಕರ ಮುಂದೆ ಅಭಿಮಾನದಿಂದ ನುಡಿದವರು ಶ್ರೀ ಧನಂಜಯ ಕುಮಾರ್, ಕರ್ನಾಟಕ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿಗಳು. ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಎರಡು ದಿನಗಳ ರಾಜ್ಯೋತ್ಸವ ಸಮಾರಂಭವನ್ನು ನವೆಂಬರ್ 19ರಂದು ಸಂಘದ ಸಭಾಂಗಣದಲ್ಲಿ ಉದ್ಘಾಟಿಸಿದ ಶ್ರೀ ಧನಂಜಯ ಕುಮಾರ್ ಅವರು "ದೆಹಲಿ ಕನ್ನಡಿಗರೆಲ್ಲರೂ ಒಟ್ಟಾಗಿ, ಭಾವೈಕ್ಯತೆಯಿಂದ ರಾಜ್ಯೋತ್ಸವ ಆಚರಿಸುತ್ತಿರುವುದು ನಿಜಕ್ಕೂ ವಿಶೇಷ. ಹೊರನಾಡಿನ ರಾಜ್ಯೋತ್ಸವ ಆಚರಣೆ ಅತ್ಯಂತ ಮಹತ್ವಪೂರ್ಣ ಹಾಗೂ ಹೆಮ್ಮೆಯ ಸಂಗತಿ. ಕೇವಲ ರಾಜ್ಯೋತ್ಸವ ಸಂದರ್ಭದಲ್ಲಿ ಮಾತ್ರವಲ್ಲ, ಇಡೀ ವರ್ಷ ಆಚರಿಸುವ ಮೂಲಕ ಭವ್ಯ ಪರಂಪರೆಯುಳ್ಳ ಕನ್ನಡ ಭಾಷೆಯ ಹಿರಿಮೆ–ಗರಿಮೆಯನ್ನು ರಾಷ್ಟ್ರದ ರಾಜಧಾನಿಯುಲ್ಲಿ ಎತ್ತಿ ಹಿಡಿಯುವ ಕೆಲಸ ನಿರಂತರವಾಗಿ ಸಾಗಬೇಕು" ಎಂದು ನುಡಿದರು.

ವಾರ್ತಾ ಇಲಾಖೆಯ ಉಪನಿರ್ದೇಶಕರಾದ ಎಸ್.ವಿ. ಲಕ್ಷ್ಮೀನಾರಾಯಣ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ ದೆಹಲಿ ಕಲಾವಿದರೊಳಗೆ ಹುದುಗಿರುವ ಕಲೆಯನ್ನು ಹೊರತೆಗೆದು ಪ್ರತಿಬಿಂಬಿಸುವ ಪ್ರಯತ್ನ ಯಶಸ್ವಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಕುವೆಂಪು ಭಾಷಾ ಭಾರತಿ ಬೆಂಗಳೂರು, ಅಧ್ಯಕ್ಷರು ಹಾಗು ಖ್ಯಾತ ಅನುವಾದಕ ಪ್ರಧಾನ್ ಗುರುದತ್ ಅವರು ಹೊರನಾಡಿನ ಸಂಭ್ರಮದ ರಾಜ್ಯೋತ್ಸವದಲ್ಲಿ ಪಾಲ್ಗೊಂಡಿರುವುದು ತಮ್ಮ ಸುಯೋಗ ಎಂಬುದಾಗಿ ತಿಳಿಸಿದರು. "ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ ಕನ್ನಡವೆಂಬುದು ಬರೀ ಭಾಷೆಯಲ್ಲ, ಅದು ಮಂತ್ರ ಕಣಾ, ಶಕ್ತಿ ಕಣಾ ಎಂಬುದು ಎಂದೆಂದಿಗೂ ಸತ್ಯ. ಭಾಷೆ ಆತ್ಮಾಭಿಮಾನದ ಪ್ರತೀಕ. ಕನ್ನಡ ನಾಡು, ನುಡಿ, ಸಂಸ್ಕೃತಿಯ ಮಹತ್ವವನ್ನು ಮುಂದಿನ ತಲೆಮಾರಿಗೆ ತಲುಪಿಸುವ ಸಲುವಾಗಿ ಇಂತಹ ಕಾರ್ಯಕ್ರಮಗಳು ಬಹಳ ಮುಖ್ಯ" ಎಂದು ಗುರುದತ್ ಅವರು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ವೆಂಕಟಾಚಲ ಹೆಗಡೆ ಅವರು "ಜಾಗತೀಕರಣದ ಈ ಸಂದರ್ಭದಲ್ಲಿ ಇಂತಹ ಆಚರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯವಶ್ಯಕ. ಸಮಾರಂಭದ ಸಲುವಾಗಿ ಕಳೆದ ಹತ್ತು ದಿನಗಳಿಂದಲೂ ಇಡೀ ಕರ್ನಾಟಕ ಸಂಘ ಕನ್ನಡಮಯ ವಾತಾವರಣದಿಂದ ತುಂಬಿ ತುಳುಕುತ್ತಿರುವುದು ಸಂತಸದ ಸಂಗತಿ" ಎಂದು ತಮ್ಮ ಹರ್ಷ ವ್ಯಕ್ತಪಡಿಸುತ್ತಾ ಇಂತಹ ಅದ್ಭುತ, ವೈಶಿಷ್ಟ್ಯಪೂರ್ಣ ಸಮಾರಂಭದ ಬೆನ್ನೆಲುವಾಗಿ ಆಯೋಜಿಸಿದ ವಾರ್ತಾ ಇಲಾಖೆಯ ಸಹಕಾರ, ನೆರವು, ಪ್ರೋತ್ಸಾಹಕ್ಕಾಗಿ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳನ್ನು ಸಮರ್ಪಿಸಿದರು.

'ಜಯಭಾರತ ಜನನಿಯ ತನುಜಾತೆ' ನಾಡಗೀತೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಕಾರ್ಯಕ್ರಮವನ್ನು ಬೆಂಗಳೂರಿನ ವಾರ್ತಾ ಇಲಾಖೆಯ ಚೇತನ್ ನಿರ್ವಹಿಸಿದರು, ಸಂಘದ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಂದಿಸಿದರು. ಕಾರ್ಯಕ್ರಮದ ಪ್ರಾರಂಭದಿಂದ ಅಂತ್ಯದವರೆಗೂ ಸಾಂಸ್ಕೃತಿಕ ರಸದೌತಣವನ್ನು ಆನಂದಿಂದ ಅನುಭವಿಸಿದ ಶ್ರೀ ಧನಂಜಯ ಕುಮಾರ್ ಅವರು ವಿಶೇಷ ಮೆಚ್ಚುಗೆ ವ್ಯಕ್ತಪಡಿಸಿದ್ದು ಹಾಗೂ ಕಿಕ್ಕಿರಿದು ತುಂಬಿದ್ದ ಸಭಾಂಗಣ ಇಂದಿನ ವಿಶೇಷತೆಯಾಗಿತ್ತು.


ಸುಗಮ ಸಂಗೀತ–ಒಂದೆ ಒಂದೇ ಕರ್ನಾಟಕ ಒಂದೇ, ವಿಶ್ವವಿನೂತನ, ತಾಯೆ ಬಾರ ಮೊಗವ ತೋರ, ಬಾರಿಸು ಕನ್ನಡ ಡಿಂಡಿಮವ

ಶ್ರೀನಿವಾಸ ಜಿ. ಕಪ್ಪಣ್ಣ ಅವರ ಪರಿಕಲ್ಪನೆ, ವಿನ್ಯಾಸ ಹಾಗೂ ದಕ್ಷ ನಿರ್ದೇಶನದಲ್ಲಿ ಕರ್ನಾಟಕದ ಖ್ಯಾತ ಕಲಾ ತಂಡದಿಂದ ತರಬೇತಿ ಪಡೆದ ದೆಹಲಿ ಕಲಾವಿದರಿಂದ "ಕನ್ನಡವೇ ಶ್ರೇಷ್ಠ"–ವಿಶೇಷ ಕಾರ್ಯಕ್ರಮ.
ಸುಗಮ ಸಂಗೀತ, ಜಾನಪದ ಗೀತೆ, ರಂಗ ಗೀತೆ, ಕಂಸಾಳೆ, ಕೋಲಾಟ, ಜಾನಪದ ನೃತ್ಯ ಹಾಗೂ ಸಮೂಹ ನೃತ್ಯ ಕಾರ್ಯಕ್ರಮಗಳ ಅಭೂತಪೂರ್ವ ಸಂಭ್ರದ ಕ್ಷಣಗಳು. . . . ನಿಮಗಾಗಿ




ಮಕ್ಕಳ ನೃತ್ಯ. . . ಎಲೆಗಳು ನೂರಾರು



ಬೀಸು ಕಂಸಾಳೆ



ನರ್ತಿಸು ತಾಯೆ–ಸಮೂಹ ನೃತ್ಯ



ಲಂಬಾಣಿ ನೃತ್ಯ



ಚೆಲ್ಲಿದರು ಮಲ್ಲಿಗೆಯಾ–ಜಾನಪದ ನೃತ್ಯ




ಚೆಲ್ಲಿದರು ಮಲ್ಲಿಗೆಯಾ–ಜಾನಪದ ನೃತ್ಯ



ಕೋಲಾಟ



ಎಲ್ಲಾದರು ಇರು–ಸಮೂಹ ನೃತ್ಯ



ಜಾನಪದ ಗೀತೆಗಳು–ಹಾಡಿರೆ ರಾಗಗಳ, ನಿಂಬಿಯಾ, ಶಿವನು ಭಿಕ್ಷೆಗೆ ಬಂದ, ತಿಂಗಳು ಮುಳುಗಿದಾವು



ರಂಗಗೀತೆಗಳು–ಗಜವದನ, ಶರಣು, ಇದೇ ತೊಟ್ಟಿಲಲ್ಲಿ, ಮಟ್ಟಬ್ಯಾಡಿರೋ, ಮರುಳು ಮಾಡಾಕೆ ಹೋಗಿ

## ತರಬೇತುದಾರರನ್ನು ಅಭಿನಂದಿಸುತ್ತಿರುವ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು


ಸುಗಂಧಾ ಉದಯ್ ಕುಮಾರ್




ಮೊಹಮ್ಮದ್ ತಹಸಿನ್ ಅಲಿ


ಕಲ್ಪನಾ ನಾಗನಾಥ್


ನಿಶಾಂತ್ ವೆಂಕಟೇಶ್


ಅನಿತಾ ಕುಮಾರಿ


ಡಿ. ಇಂದುಮತಿ


ಸಿ.ಎಂ. ನರಸಿಂಹ ಮೂರ್ತಿ


ಬಿ.ಬಸವರಾಜು


ರಾಜಣ್ಣ


ಎಚ್.ಸಿ. ತಿಪ್ಪೇಸ್ವಾಮಿ



ಮಹಾಲಿಂಗ


ಸಿದ್ದರಾಜು ಎಸ್.ಎಸ್.


ಶುಭಾಂಗಿ


ಎಸ್.ಎನ್. ದೇಶಪಾಂಡೆ


ಗಿರೀಶ್ ದಂಪತಿಗಳಿಗೆ ಅಭಿನಂದನೆ


ಶ್ರೀನಿವಾಸ್ ಜಿ. ಕಪ್ಪಣ್ಣ ಅವರಿಗೆ ಅಭಿನಂದನೆ

# ಏಕಾಂಕ ನಾಟಕ ಸ್ಪರ್ಧೆ



ರಾಜ್ಯೋತ್ಸವದ ಅಂಗವಾಗಿ ನವೆಂಬರ್ 13ರಂದು ದೆಹಲಿ ಕರ್ನಾಟಕ ಸಂಘ ಏಕಾಂಕ ನಾಟಕ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಉದ್ಘಾಟಿಸಿ ಶುಭ ಹಾರೈಸಿದರು. ಬಿ.ವಿ. ಅಡ್ಕೋಳಿ, ಅರವಿಂದ ಕೌಜಲಗಿ ಹಾಗೂ ಕರ್ನಾಟಕದ ಸಿದ್ದರಾಜು ಅವರುಗಳು ತೀರ್ಪುಗಾರರಾಗಿ ಭಾಗವಹಿಸಿದ್ದರು. ಈ ಸ್ಪರ್ಧೆಯನ್ನು ದೆಹಲಿಯ ಕನ್ನಡ ಭಾರತಿಯ ಸಕ್ರಿಯ ಕಲಾವಿದರಾಗಿದ್ದ ದಿವಂಗತ ಯು. ಪ್ರಭಾಕರ ರಾವ್ ಅವರಿಗೆ ಅರ್ಪಿಸಲಾಯಿತು. ಈ ಸ್ಪರ್ಧೆಯಲ್ಲಿ ಜನಕಪುರಿ ಕನ್ನಡ ಕೂಟದಿಂದ 'ಯುಗಾಂತರ ಸತ್ಯ' ಮತ್ತು ಕೆಂಪುಕೋಟೆ ತಂಡದಿಂದ 'ಮೆಸೇಜ್ ಬಂತು' ನಾಟಕಗಳು ಪ್ರದರ್ಶನಗೊಂಡವು.

**ಯುಗಾಂತರ ಸತ್ಯ :** ಯುಗಯುಗಗಳಲ್ಲೂ ಸತ್ಯಕ್ಕೆ ಜಯವುಂಟು ಎಂಬ ಸಾರಾಂಶವುಳ್ಳ ಭಕ್ತಪ್ರಹ್ಲಾದನ ಪೌರಾಣಿಕ ಕಥೆಯನ್ನು ವಸ್ತುವಾಗಿರಿಸಿಕೊಂಡು ಪ್ರವೃತ್ತಿ ನಾಟಕ ಹವ್ಯಾಸಕಾರರಾದ ಬಸವಯ್ಯನವರು ಜನರಿಗೆ ಸತ್ಯಕ್ಕೆ ಎಂದೂ ಜಯವಿದೆ ಎಂದು ಈ ನಾಟಕದಲ್ಲಿ ನಿರೂಪಿಸಲು ಯತ್ನಿಸಿದ್ದಾರೆ. ಪ್ರಸ್ತುತದ ಹಣದುಬ್ಬರ, ಭ್ರಷ್ಟಾಚಾರ ಜನರಲ್ಲಿ ಭಯ ಹಾಗೂ ಆತಂಕವನ್ನು ಮೂಡಿಸಿರುವುದರಿಂದ 'ಲೋಕ್‌ಪಾಲ್' ನಾಗಿ ಆ ಭಗವಂತನು ಅವತಾರವೆತ್ತುತ್ತಾನೆ ಎಂದು ಹೇಳಿ ಒಂದು ಆಶಾಕಿರಣವನ್ನು ಮೂಡಿಸಲು ಯತ್ನಿಸಿದರು. ಜನಕಪುರಿ ಕನ್ನಡ ಕೂಟದ ಈ ನಾಟಕದ ರಚನೆ ಮತ್ತು ನಿರ್ದೇಶಕ ಶ್ರೀ ಎಂ.ವಿ. ವೆಂಕಟೇಶ್.





**ಮೆಸೇಜ್ ಬಂತು :** ಹಳ್ಳಿಯ ಯುವಕನೊಬ್ಬನಿಗೆ ಸ್ನೇಹ ಪ್ರೀತಿ ತುಂಬಿದ ಮೊಬೈಲ್ ಮೆಸೇಜ್‌ಗಳು ಬರುತ್ತಿರುತ್ತವೆ. ಊರಿನ ಹುಡುಗರಿಗೆ ಅದೊಂದು ಮೋಜಿನ ವಿಷಯವಾದರೆ ಆ ಯುವಕನು ಮೆಸೇಜ್‌ಗಳ ಮೂಲಕ ಪ್ರೇಮಲೋಕದ ಕನಸನ್ನು ನೇಯುತ್ತಾನೆ. ಅದೇ ಹಳ್ಳಿಯಲ್ಲಿ ಉದ್ಯಮಿಯೊಬ್ಬ ಒಂದು ಬೃಹತ್ ಫ್ಯಾಕ್ಟರಿಯನ್ನು ಸ್ಥಾಪಿಸಲು ಯೋಚಿಸುತ್ತಾನೆ. ಫ್ಯಾಕ್ಟರಿ ಬಂದರೆ ವಿದ್ಯೆ ಕಲಿತ ಯುವಕರಿಗೆ ಅದೇ ಹಳ್ಳಿಯಲ್ಲಿ ಕೆಲಸ ದೊರೆತು ಅವರು ಅಲ್ಲಿಯೇ ನೆಲೆಸಬಹುದು ಎಂಬ ಆಸೆ ಒಂದೆಡೆ. ಆ ಊರಿನ ಫಲವತ್ತಾದ ಕೃಷಿ ಭೂಮಿ ನಾಶವಾಗುವುದೋ ಎಂಬ ಆತಂಕ ಇನ್ನೊಂದೆಡೆ. ಇತ್ತ ಹಳ್ಳಿಯ ಯುವಕನು ತನಗೆ ಮೆಸೇಜ್ ಕಳುಹಿಸಿದ ಕನಸಿನ ಕನ್ಯೆಯನ್ನು ಭೇಟಿಯಾಗುವ ಸಂಭ್ರಮದಲ್ಲಿದ್ದರೆ ಊರವರು ತಮ್ಮೂರಿಗೆ ಕವಿದ ಕಾರ್ಮೋಡ ಹೇಗೆ ಮಳೆಯಾಗಿ ಹರಿಯುವುದು ಎಂಬುದನ್ನು ಕಾಯುತ್ತಾರೆ. ರಚನೆ ಮತ್ತು ನಿರ್ದೇಶನ : ಬಾಲಕೃಷ್ಣ ನಾಯ್ಕ್ ಡಿ.





### ನಾಟಕ ಸ್ಪರ್ಧೆಯ ಫಲಿತಾಂಶ

ಶ್ರೇಷ್ಠ ನಾಟಕ : ಪ್ರಥಮ : ಮೆಸೇಜ್ ಬಂತು, ದ್ವಿತೀಯ : ಯುಗಾಂತರ ಸತ್ಯ, ಶ್ರೇಷ್ಠ ನಿರ್ದೇಶಕ : ಪ್ರಥಮ : ಬಾಲಕೃಷ್ಣ ನಾಯ್ಕ್ ಡಿ., ದ್ವಿತೀಯ : ಎಂ.ವಿ. ವೆಂಕಟೇಶ್, ಶ್ರೇಷ್ಠ ನಟ : ಪ್ರಥಮ : ಪ್ರಕಾಶ್ ಶೆಟ್ಟಿ ಉಳೆಪಾಡಿ, ದ್ವಿತೀಯ : ವೈ. ಅವನೀಂದ್ರನಾಥ್ ರಾವ್, ತೀರ್ಪುಗಾರರ ವಿಶೇಷ ನಟ : ಎನ್.ಆರ್. ಶ್ರೀನಾಥ್– ಯುಗಾಂತರ ಸತ್ಯ , ತೀರ್ಪುಗಾರರ ವಿಶೇಷ ನಟಿ : ಅನಿತಾ–ಮೆಸೇಜ್ ಬಂತು, ಅತ್ಯುತ್ತಮ ಬೆಳಕು : ಮೆಸೇಜ್ ಬಂತು : ಸಾಮ್ರಾಟ್ ಗೌಡ, ಅತ್ಯುತ್ತಮ ರಂಗವಿನ್ಯಾಸ : ಮೆಸೇಜ್ ಬಂತು : ಅನಿತಾ , ಅತ್ಯುತ್ತಮ ವೇಷಭೂಷಣ : ಯುಗಾಂತರ ಸತ್ಯ : ಶಶಿಕಾಂತ್ ಪಾಟೀಲ್, ತೀರ್ಪುಗಾರರ ವಿಶೇಷ ಪ್ರಶಸ್ತಿ–ಅತ್ಯುತ್ತಮ ಬಾಲಪ್ರತಿಭೆ : ಅಪೂರ್ವ ನೃತ್ಯ ತಂಡದ ಬಾಲ ನಟಿಯರು

# ದೆಹಲಿಯ ಹಿರಿಯರಿಗೆ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪ್ರದಾನ ಸಮಾರಂಭ

ನವೆಂಬರ್ 19ರಂದು ಎರಡು ದಿನಗಳ ರಾಜ್ಯೋತ್ಸವ ಸಮಾರಂಭ ಪ್ರಾರಂಭವಾಗಿ ದೆಹಲಿ ಕಲಾವಿದರ ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮಗಳ ಅಭೂತಪೂರ್ವ ಯಶಸ್ಸಿನೊಂದಿಗೆ ದೆಹಲಿ ಕನ್ನಡಿಗರ ಅಪಾರ ಪ್ರಶಂಸೆಗೆ ಪಾತ್ರವಾಯಿತು. ನವೆಂಬರ್ 20ರಂದು ಕನ್ನಡ ನಾಡು, ನುಡಿಗಾಗಿ ಸೇವೆ ಸಲ್ಲಿಸಿದ ಹಿರಿಯ ದೆಹಲಿ ಕನ್ನಡಿಗರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಹಾಗೂ ವಿದ್ಯಾರ್ಥಿ ವೇತನ ವಿತರಣೆ ಸಮಾರಂಭವನ್ನು ಆಯೋಜಿಸಲಾಗಿತ್ತು. ಶ್ರೀ ಸಿ.ಎಸ್. ಕೇದಾರ್, ಮಹಾನಿರ್ದೇಶಕ, ಇ.ಎಸ್.ಐ. ಸೇವೆಗಳು, ಭಾರತ ಸರ್ಕಾರ, ಶ್ರೀಮತಿ ವಂದನಾ ಗುರ್‌ನಾನಿ, ಸ್ಥಾನಿಕ ಆಯುಕ್ತರು, ಕರ್ನಾಟಕ ಭವನ, ನವದೆಹಲಿ ಹಾಗೂ ಡಾ. ಮುದ್ದುಮೋಹನ್, ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು ಇವರುಗಳು ಸಮಾರಂಭದಲ್ಲಿ ಅತಿಥಿಗಳಾಗಿ ಪಾಲ್ಗೊಂಡಿದ್ದರು. ವೈ.ಕೆ. ಮುದ್ದುಕೃಷ್ಣ ಮತ್ತು ತಂಡದವರು ಸುಮಧುರ ಭಾವಗೀತೆಗಳನ್ನು ಪ್ರಸ್ತುತಪಡಿಸಿದರು. ವಾರ್ತಾ ಇಲಾಖೆಯ ಉಪನಿರ್ದೇಶಕರಾದ ಎಸ್.ವಿ. ಲಕ್ಷ್ಮೀನಾರಾಯಣ ಅವರು ಅತಿಥಿಗಳನ್ನು ಸ್ವಾಗತಿಸಿ ಶುಭ ಹಾರೈಸಿದರು. ಶ್ರೀಮತಿ ವಂದನಾ ಗುರ್‌ನಾನಿ ಹಾಗೂ ಇತರೆ ಗಣ್ಯರು ದೀಪವನ್ನು ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.



**ಸುಪ್ರೀಂಕೋರ್ಟಿನ ಹಿರಿಯ ನ್ಯಾಯವಾದಿಗಳಾಗಿ ಕಾನೂನು ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸುತ್ತಾ ಕಳೆದ ಐದು ದಶಕಗಳಿಂದ ದೆಹಲಿಯಲ್ಲಿ ನೆಲೆಸಿ ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತಿತರ ಕನ್ನಡ ಪರ ಸಂಘ ಸಂಸ್ಥೆಗಳಿಗೆ ತಮ್ಮ ಅತ್ಯಮೂಲ್ಯವಾದ ಸೇವೆ ನೀಡಿದ ನೇರ ನಡೆ, ನುಡಿಯ ಶ್ರೀ ಎಂ ವೀರಪ್ಪ ಅವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.**



ಪಶಸ್ತಿ ಸ್ವೀಕರಿಸಿದ ವೀರಪ್ಪನವರು ದೆಹಲಿಯ ತಮ್ಮ ವೃತ್ತಿ ಜೀವನ ಹಾಗೂ ಕರ್ನಾಟಕ ಸಂಘದ ಒಡನಾಟದ ಹಿಂದಿನ ದಿನಗಳನ್ನು ಮೆಲುಕು ಹಾಕಿದರು. ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಪರವಾಗಿ ಕಾರ್ಯದರ್ಶಿ ಸುಷ್ಮಾ ಬಿಢೆ ಹಾಗೂ ಕನ್ನಡ ಶಿಕ್ಷಣ ಸಂಸ್ಥೆಯ ಪರವಾಗಿ ಕಾರ್ಯದರ್ಶಿ ಆಂಜನಿ ಗೌಡ ಅವರು ಹೂಗುಚ್ಛ ನೀಡಿ ಅಭಿನಂದಿಸಿದರು.

**ಮೂರು ದಶಕಗಳಿಂದ ರಾಷ್ಟ್ರದ ರಾಜಧಾನಿಯಲ್ಲಿ ಸಮಾಜ ಸೇವೆ ಮತ್ತು ಸ್ತ್ರೀಶಕ್ತಿ ಕೇಂದ್ರಿತ ಚಟುವಟಿಕೆಗಳಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಾ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ಸಂಸ್ಥೆಗಳ ಸಂಘಟಕರಾಗಿ ತಮ್ಮ ಉತ್ತಮ ಸೇವೆ ಸಲ್ಲಿಸುತ್ತಾ ಮಹಿಳಾಪರ ಧ್ಯೇಯೋದ್ದೇಶಗಳಿಗೆ ಸದಾ ಅರ್ಥಪೂರ್ಣವಾಗಿ ಸ್ಪಂದಿಸುತ್ತಿರುವ ಶ್ರೀಮತಿ ಸುಮಿತ್ರಾ ರಾವ್ ಅವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.**

ಪ್ರಶಸ್ತಿ ಸ್ವೀಕರಿಸಿದ ಶ್ರೀಮತಿ ಸುಮಿತ್ರಾ ರಾವ್ ಅವರು ಕಳೆದ ಆರು ದಶಕಗಳಿಂದ ದೆಹಲಿ ಕರ್ನಾಟಕ ಸಂಘಕ್ಕೆ ಸೇವೆ ಸಲ್ಲಿಸಿದ ಹಿರಿಯರನ್ನು ಸ್ಮರಿಸುತ್ತಾ, ಸಾಂಸ್ಕೃತಿಕ ಸಮುಚ್ಚಯದ ಕನಸು ನನಸಾಗಿದ್ದಕ್ಕೆ ಸಂತಸ ವ್ಯಕ್ತಪಡಿಸುತ್ತಾ ಭಾವುಕರಾಗಿ ವಂದಿಸಿದರು. ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಪರವಾಗಿ ಅಧ್ಯಕ್ಷೆ ರಂಗಮಣಿ ರಾವ್ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪರವಾಗಿ ಉಪಾಧ್ಯಕ್ಷೆ ಡಾ. ಅಹಲ್ಯಾ ಚಿಂತಾಮಣಿ ಹೂಗುಚ್ಛ ನೀಡಿ ಅಭಿನಂದಿಸಿದರು.

ಮತ್ತೋರ್ವ ವಿಶಿಷ್ಟ ಕನ್ನಡಿಗ ಪ್ರಶಸ್ತಿ ವಿಜೇತ ಎನ್.ಜೆ. ಕಾಮತರನ್ನು ಅವರ ಅನುಪಸ್ಥಿತಿಯಲ್ಲಿ ಅಭಿನಂದಿಸಲಾಯಿತು.

ಸಮಾರಂಭವನ್ನು ಉದ್ಘಾಟಿಸಿದ ವಂದನಾ ಗುರ್‌ನಾನಿ ಅವರು ದೆಹಲಿ ಕನ್ನಡಿಗರೊಡನೆ ಕುಳಿತು ರಾಜ್ಯೋತ್ಸವ ಆಚರಿಸುತ್ತಿರುವುದು ತಮಗೆ ಅತೀವ ಸಂತಸವನ್ನುಂಟು ಮಾಡಿದೆ ಎಂದು ಶುಭ ಹಾರೈಸಿದರು.

ದೆಹಲಿ ಕರ್ನಾಟಕ ಸಂಘ ಮತ್ತು ವಾರ್ತಾ ಇಲಾಖೆ ಜಂಟಿಯಾಗಿ ಅದ್ದೂರಿಯಾಗಿ ಆಯೋಜಿಸಿದ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಶ್ಲಾಘಿಸಿದ ಸಿ.ಎಸ್. ಕೇದಾರ್ ಅವರು ಕರ್ನಾಟಕ ಸಂಘದ ಬೆಳವಣಿಗೆಗೆ ಶ್ರಮಿಸಿದ ಹಿರಿಯರನ್ನು ಗುರುತಿಸಿ ಸನ್ಮಾನಿಸುವ ಸಂಪ್ರದಾಯಕ್ಕೆ ತಮ್ಮ ಅಭಿಮಾನ ಸೂಚಿಸಿದರು ಹಾಗೂ ಸನ್ಮಾನ ಸ್ವೀಕರಿಸಿದ ಹಿರಿಯರನ್ನು ತುಂಬು ಹೃದಯದಿಂದ ಅಭಿನಂದಿಸಿದರು. "ಕೆಲವರಿಗೆ ಪ್ರಶಸ್ತಿ ಶೋಭೆ ತರುತ್ತದೆ ಆದರೆ ಕೆಲವರು ಪ್ರಶಸ್ತಿಗೆ ಶೋಭೆ ತರುತ್ತಾರೆ. ಹೀಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಗೌರವ ತಂದುಕೊಟ್ಟ ವ್ಯಕ್ತಿ ಡಾ.ಪುರುಷೋತ್ತಮ ಬಿಳಿಮಲೆ. ಅವರಿಗೆ ಸಂದ ಪ್ರಶಸ್ತಿ ನಮ್ಮೆಲ್ಲರಿಗೂ ಕೊಟ್ಟಂತ ಪ್ರಶಸ್ತಿ" ಎನ್ನುತ್ತ ಹೃತ್ಪೂರ್ವಕವಾಗಿ ಅಭಿನಂದಿಸುವ ಜತೆಗೆ ಎಲ್ಲರ ಕೋರಿಕೆಯ ಮೇರೆಗೆ "ಅದು ಬೆಟ್ಟ ಇದು ಬೆಟ್ಟವೋ ನಂಜುಂಡ" ಹಾಡನ್ನು ಸುಶ್ರಾವ್ಯವಾಗಿ ಹಾಡಿ ರಂಜಿಸಿದರು.

ಒಂದು ವಾರದಿಂದ ದೆಹಲಿ ಕನ್ನಡಿಗರಿಗೆ ಜನಪದ ಹಾಡುಗಳ ತರಬೇತಿ ನೀಡಿದ ಕಲಾವಿದ ನರಸಿಂಹಮೂರ್ತಿ ಅವರ "ಧರೆಗೆ ದೊಡ್ಡವರು" ಜನಪದ ಗೀತೆಗಳ ಧ್ವನಿ ಸುರುಳಿಯನ್ನು ಈ ಸುಸಂದರ್ಭದಲ್ಲಿ ಬಿಡುಗಡೆ ಮಾಡಿದ ವಾರ್ತಾ ಇಲಾಖೆಯ ನಿರ್ದೇಶಕರಾದ ಡಾ. ಮುದ್ದುಮೋಹನ್ ಅವರು ದೂರ ದೇಶಕ್ಕೆ ಹೋದ ಸಮಯದಿ ತನ್ನ ನಾಡನ್ನು ನೆನೆದು ಉಬ್ಬದ ಮನುಷ್ಯನಿಲ್ಲವೆಂಬಂತ ಕವಿವಾಣಿಯ ಆಶಯದಂತೆ ದೆಹಲಿ ಕನ್ನಡಿಗರು ಇಷ್ಟು ಉತ್ಸುಕತೆಯಿಂದ ರಾಜ್ಯೋತ್ಸವವನ್ನು ಆಚರಿಸುತ್ತಿರುವುದನ್ನು ಕಂಡು ಮೂಕವಿಸ್ಮಿತರಾಗುವಂತೆ ಮಾಡಿದ ದೆಹಲಿ ಕರ್ನಾಟಕ ಸಂಘವನ್ನು ಅಭಿನಂದಿಸಿದರು. ದೆಹಲಿ ಕನ್ನಡಿಗರಿಗೆ ರಾಜ್ಯೋತ್ಸವ ಪ್ರಶಸ್ತಿಗಳು ಬರ್‍ತಾ ಇರಲಿ ಎನ್ನುತ್ತ ರಾಜ್ಯೋತ್ಸವ ಪ್ರಶಸ್ತಿ ಪಡೆದ ಡಾ.ಬಿಳಿಮಲೆ ಅವರನ್ನು ಅಭಿನಂದಿಸಿದರು.









ಆ ನಂತರ ಸಂಘದ ನಾಟಕ ಸಮಿತಿಯ ಸಂಚಾಲಕ, ಟಿ.ಎಂ.ಮೈಲಾರಪ್ಪ ಅವರು ನಾಟಕೋತ್ಸವದಲ್ಲಿ ಪ್ರಶಸ್ತಿ ಪಡೆದ ಕಲಾವಿದರಿಗೆ ವಾರ್ತಾ ಇಲಾಖೆಯ ನಿರ್ದೇಶಕ ಡಾ.ಮುದ್ದುಮೋಹನ್ ಅವರಿಂದ ಪ್ರಶಸ್ತಿಗಳನ್ನು ಕೊಡಿಸಿದರು.

ಡಾ. ಮುದ್ದುಮೋಹನ್ ಹಾಗೂ ಸಿ.ಎಸ್. ಕೇದಾರ್ ಅವರು ಅವಶ್ಯಕತೆ ಆಧಾರ ಮತ್ತು ಪ್ರತಿಭಾವಂತ ದೆಹಲಿ ಕನ್ನಡಿಗ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಿ ಪ್ರೋತ್ಸಾಹಿಸಿದರು.


ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಅಭಿನಂದನೆ

ಇದೇ ಸಂದರ್ಭದಲ್ಲಿ 2010 ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ರಾಝು ಪ್ರಶಸ್ತಿ ವಿಜೇತ ದೆಹಲಿಯ ಯುವ ಕಲಾವಿದ ಮಂಜುನಾಥ ಕಾಮತರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಕೊನೆಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು "ದೆಹಲಿ ಕರ್ನಾಟಕ ಸಂಘವು ಹಲವಾರು ವರ್ಷಗಳಿಂದ ಕರ್ನಾಟಕ ರಾಜ್ಯೋತ್ಸವವನ್ನು 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಹಾಗೂ ವಿದ್ಯಾರ್ಥಿ ವೇತನವನ್ನು ನೀಡುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರುತ್ತಿದೆ. ಮೂರು ದಶಕಗಳಿಂದಲೂ ಈ ಪರಂಪರೆಗೆ ಸ್ಪಂದಿಸುತ್ತ ಬಂದ ಹಲವಾರು ಗಣ್ಯರು, ಮಾನನೀಯರಿದ್ದಾರೆ. ದಿವಂಗತ ಕೆ.ಆರ್. ನಾಗರಾಜ ಅವರು ಬಡ ಮಕ್ಕಳ ವಿದ್ಯಾಭ್ಯಾಸದ ನೆರವಿಗಾಗಿ ಧನಸಹಾಯವನ್ನು ನೀಡಿದ್ದಾರೆ. 'ಅಶ್ವತ್ಥ ಮೆಮೋರಿಯಲ್' ಹೆಸರಿನಲ್ಲಿ ತಮ್ಮ ಸೋದರರ ಹೆಸರಿನಲ್ಲಿ ವಿದ್ಯಾರ್ಥಿ ವೇತನಕ್ಕೆ ಅನುದಾನವನ್ನು ನೀಡಿದ ಶ್ರೀಮತಿ ಸುಮಿತ್ರಾ ರಾವ್ ಅವರು ಈ ವರ್ಷ ಹತ್ತು ಸಾವಿರ ರೂಪಾಯಿಗಳನ್ನು ನೀಡಿ ವಿದ್ಯಾರ್ಥಿವೇತನದ ಮೊತ್ತವನ್ನು ಏರಿಸಿದ್ದಾರೆ. ಇದೇ ರೀತಿ ದೆಹಲಿ ಕನ್ನಡಿಗ ಗಣ್ಯರು ವಿದ್ಯಾರ್ಥಿ ವೇತನ ನಿಧಿಗೆ ಉದಾರ ಮನಸ್ಸಿನಿಂದ ದೇಣಿಗೆ ನೀಡಿ ಬೆಳೆಸಬೇಕು" ಎಂದು ಕರೆಯಿತ್ತರು. ಮುಂದಿನ ವರ್ಷಕ್ಕೆ ಹತ್ತು ಲಕ್ಷಗಳ ಧನಸಂಗ್ರಹವನ್ನು ಮಾಡುವ ಸದುದ್ದೇಶವನ್ನು ಹೊಂದಿದ್ದೇವೆಂದು ತಿಳಿಸಿದ ಅವರು ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪಡೆದ ಸುಮಿತ್ರಾ ರಾವ್ ಹಾಗೂ ವೀರಪ್ಪ ಅವರ ಕೊಡುಗೆಗಳನ್ನು ನೆನೆಯುತ್ತ ಈ ಕಾರ್ಯಕ್ರಮದಲ್ಲಿ ಅನುಪಸ್ಥಿತರಿದ್ದ ಎನ್.ಜೆ. ಕಾಮತರನ್ನು ಅಭಿನಂದಿಸುತ್ತ ಕನ್ನಡಕ್ಕಾಗಿ ದುಡಿದ ಇಂತಹ ಹಿರಿಯರನ್ನು ಗೌರವಿಸುವುದರ ಮೂಲಕ ಕನ್ನಡ ಸಂಘವನ್ನು, ಸಂಘದ ಘನತೆಯನ್ನು ಗೌರವಿಸಿದಂತೆ ಎಂಬ ಮುತ್ತಿನಂತಹ ಮಾತನ್ನು ಹೇಳಿದರು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

ನಂತರ ಕಲಾಶ್ರೀ ವೈ.ಕೆ. ಮುದ್ದುಕೃಷ್ಣ, ಡಾ. ಮುದ್ದುಮೋಹನ್, ಶ್ರೀಮತಿ ಪ್ರೇಮಲತಾ ದಿವಾಕರ್, ಶ್ರೀಮತಿ ಸೀಮಾ ರಾಯ್ಕರ್ ಮತ್ತು ತಂಡದವರು ಸುಮಧುರ ಕನ್ನಡ ಗೀತೆಗಳನ್ನು ಅದ್ಭುತವಾಗಿ ಹಾಡಿ ರಂಜಿಸಿದರು.

ಕಂಸಾಳೆ, ಕೋಲಾಟ, ಲಂಬಾಣಿ ನೃತ್ಯ ಹಾಗೂ ಎಲ್ಲಾದರು ಇರು ನೃತ್ಯರೂಪಕವನ್ನು ಮತ್ತೊಮ್ಮೆ ಪ್ರದರ್ಶಿಸಲಾಯಿತು.


ಮಂಜುನಾಥ್ ಕಾಮತ್ ಅವರಿಗೆ ಅಭಿನಂದನೆ


ವೈ.ಕೆ. ಮುದ್ದುಕೃಷ್ಣ ಅವರಿಂದ ಸುಗಮ ಸಂಗೀತ


ಪ್ರಥಮ ಬಹುಮಾನ-ಮೆಸೇಜ್ ಬಂತು


ದ್ವಿತೀಯ ಬಹುಮಾನ-ಯುಗಾಂತರ ಸತ್ಯ

***ಹಾಸ್ಯೋಲ್ಲಾಸ :*** *ಈ ದಿನದ ವಿಶೇಷ ಆಕರ್ಷಣೆಯಾಗಿದ್ದ ಹಾಸ್ಯೋಲ್ಲಾಸ ಕಾರ್ಯಕ್ರಮದಲ್ಲಿ ಸುಪ್ರಸಿದ್ಧ ಜನಪ್ರಿಯ ಹಾಸ್ಯ ಕಲಾವಿದರಾದ ಶ್ರೀ ಕೃಷ್ಣೇಗೌಡರು ತಮ್ಮ ಅಮೋಘ ವಾಕ್ ಚಾತುರ್ಯತೆಯಿಂದ ಕಿಕ್ಕಿರಿದು ತುಂಬಿದ್ದ ಸಭಾಂಗಣವನ್ನು ನಗೆಗಡಲಿನಲ್ಲಿ ತೇಲಿಸಿದರು. ಮತ್ತೋರ್ವ ಪ್ರತಿಭಾನ್ವಿತ ಕಲಾವಿದೆ ಇಂದುಶ್ರೀ ಅವರು ತಮ್ಮ ಮಾತನಾಡುವ ಬೊಂಬೆಗಳ ನಿರರ್ಗಳ ಮಾತಿನ ಮೋಡಿಯ ಮೂಲಕ ಸಭಿಕರನ್ನು ಅದರಲ್ಲೂ ವಿಶೇಷವಾಗಿ ಮಕ್ಕಳನ್ನು ಮಂತ್ರಮುಗ್ಧರನ್ನಾಗಿಸಿದರು. ಮತ್ತೋರ್ವ ಹಾಸ್ಯ ಹಾಗೂ ಮಿಮಿಕ್ರಿ ಕಲಾವಿದ ಕೋಗಳಿ ಕೊಟ್ರೇಶ್ ಅವರು ಧ್ವನಿಯ ಮೂಲಕ ವಾದ್ಯ ಸಂಗೀತವನ್ನು ಸೃಷ್ಟಿಸಿ ಚಕಿತಗೊಳಿಸಿದರು.*

*ರಾತ್ರಿ 10.30ರವರೆಗೂ ದೆಹಲಿ ಕನ್ನಡಿಗರು ಅಪಾರ ಆಸಕ್ತಿಯಿಂದ ಕಾರ್ಯಕ್ರಮವನ್ನು ನೋಡಿ ಮನಸಾರೆ ಸಂಭ್ರಮಿಸಿದ್ದು ನಿಜಕ್ಕೂ ಅವಿಸ್ಮರಣೀಯ ಅನುಭವ.*


*ಎರಡು ದಿನಗಳ ಅಭೂತಪೂರ್ವ ಸಾಂಸ್ಕೃತಿಕ ರಸದೌತಣವನ್ನು ಪ್ರಾಯೋಜಿಸಿದ್ದು ವಾರ್ತಾ ಇಲಾಖೆಯ ನಿರ್ದೇಶಕ ಡಾ. ಮುದ್ದುಮೋಹನ್, ಉಪನಿರ್ದೇಶಕ ಗಿರೀಶ್ ಹಾಗೂ "ಕನ್ನಡವೇ ಶ್ರೇಷ್ಠ" ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿ, ನಿರ್ದೇಶಿಸಿದ ಶ್ರೀನಿವಾಸ ಜಿ. ಕಪ್ಪಣ್ಣ ಹಾಗೂ ಅಲ್ಪ ಸಮಯದಲ್ಲಿ ದೆಹಲಿ ಕಲಾವಿದರನ್ನು ತರಬೇತಿಗೊಳಿಸಿದ ಕರ್ನಾಟಕದ ಎಲ್ಲ ಖ್ಯಾತ ಕಲಾ ತಂಡದವರಿಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃದಯಪೂರ್ವಕ ಧನ್ಯವಾದಗಳು.*



ಕೃಷ್ಣೇಗೌಡ



ಇಂದುಶ್ರೀ



ಕೋಗಳಿ ಕೊಟ್ರೇಶ್


# Saujanya Printing Press

**A HOUSE OF QUALITY PRINTING**

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**




# ರಾಜ್ಯೋತ್ಸವ ಸಮಾರೋಪ ಸಮಾರಂಭ



ನವೆಂಬರ್ ತಿಂಗಳಿಡೀ ರಾಜ್ಯೋತ್ಸವ ಸಂಭ್ರಮ ಕರ್ನಾಟಕ ಸಂಘದ ಸಭಾಂಗಣದಲ್ಲಿ ಅದ್ದೂರಿಯಾಗಿ ನೆರವೇರಿತು. ಸಮಾರಂಭದ ಸಲುವಾಗಿ ನವೆಂಬರ್ 26ರಂದು ಖ್ಯಾತ ಕಲಾವಿದ ಕೊಂಡದ ಕುಳಿ ಶ್ರೀ ರಾಮಚಂದ್ರ ಹೆಗಡೆ ಅವರಿಂದ ಏಕವ್ಯಕ್ತಿ ಯಕ್ಷಗಾನ ಕಲಾ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಭಾರತ ಸರ್ಕಾರದ ನಿವೃತ್ತ ಪ್ರಧಾನ ವಾರ್ತಾಧಿಕಾರಿ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ, ಹಿರಿಯ ದೆಹಲಿ ಕನ್ನಡಿಗ ಐ. ರಾಮಮೋಹನ ರಾವ್ ಹಾಗೂ ದೆಹಲಿ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಟಿ.ಎಸ್. ಸತ್ಯನಾಥ್ ಅವರು ಸಮಾರಂಭದ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಅರ್ಥಪೂರ್ಣ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನವೆಂಬರ್ ತಿಂಗಳಿಡೀ ಆಚರಿಸಿದ ಸಂತಸವನ್ನು ನೆರೆದಿದ್ದ ಕನ್ನಡಿಗರೊಡನೆ ಹಂಚಿಕೊಂಡ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಅತಿಥಿಗಳನ್ನು ಸ್ವಾಗತಿಸಿದರು. ಕೇವಲ ನವೆಂಬರ್ ತಿಂಗಳ ಕನ್ನಡ ಪ್ರೇಮವಾಗಿರದೇ ವರ್ಷವಿಡೀ ಸಂಭ್ರಮಿಸುವ ಪ್ರವೃತ್ತಿಯನ್ನು ಪ್ರತಿಯೊಬ್ಬ ಕನ್ನಡಿಗರೂ ಬೆಳೆಸಿಕೊಳ್ಳಬೇಕು ಎಂಬುದಾಗಿ ಕರೆ ಇತ್ತರು. ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಎಲ್ಲರನ್ನೂ ತುಂಬು ಮನಸ್ಸಿನಿಂದ ಸ್ಮರಿಸುತ್ತಾ ವಂದಿಸಿದರು.



ನವೆಂಬರ್ 20ರಂದು ಸಮಯದ ಅಭಾವದಿಂದಾಗಿ ವಿದ್ಯಾರ್ಥಿ ವೇತನವನ್ನು ಪೂರ್ಣವಾಗಿ ನೀಡಲು ಸಾಧ್ಯವಾಗದ ಕಾರಣ ಮತ್ತೊಮ್ಮೆ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳಿಗೆ ಅತಿಥಿಗಳಿಂದ ಪ್ರಮಾಣ ಪತ್ರ ನೀಡಲಾಯಿತು. ಸಂಘದ ಖಜಾಂಚಿ ಕೆ.ಆರ್. ರಾಮಮೂರ್ತಿ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ನಂತರ "ಕನ್ನಡವೇ ಶ್ರೇಷ್ಠ" ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕಲಾವಿದರುಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಈ ಕಾರ್ಯಕ್ರಮವನ್ನು ಸಂಘದ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ನಿರ್ವಹಿಸಿದರು.

ಕಳೆದ 35ವರ್ಷಗಳಿಂದ ದೆಹಲಿಯಲ್ಲೇ ನೆಲೆಸಿ ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಪಿ.ಎನ್. ಅಪ್ಪಯ್ಯ ಮತ್ತು ಲೀಲಾ ಅಪ್ಪಯ್ಯ ದಂಪತಿಗಳು ತಮ್ಮ ತವರೂರಾದ ಕೊಡಗಿಗೆ ಮರಳುತ್ತಿರುವ ಸಲುವಾಗಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ದೆಹಲಿ ಕರ್ನಾಟಕ ಸಂಘದ ಕ್ರೀಡಾ ಸಮಿತಿಯ ಅಧ್ಯಕ್ಷರಾಗಿ ಅಪ್ಪಯ್ಯ ಅವರು ಸಂಘಕ್ಕೆ ಆರ್ಥಿಕವಾಗಿ ಹೊರೆಯಾಗದಂತೆ ಯಶಸ್ವಿಯಾಗಿ ಆಟೋಟ ಸ್ಪರ್ಧೆಗಳನ್ನು ನಡೆಸಿದ್ದನ್ನು ಅಭಿಮಾನದಿಂದ ಸ್ಮರಿಸಲಾಯಿತು. ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳಿಗೆ ಸೇವೆ ಸಲ್ಲಿಸಿದ ಅಪ್ಪಯ್ಯ ದಂಪತಿಗಳನ್ನು ಅಭಿನಂದಿಸಿ ಶುಭ ಕೋರಲಾಯಿತು. ಅಭಿನಂದನೆ ಸ್ವೀಕರಿಸಿದ ಅಪ್ಪಯ್ಯ ಅವರು "ದೆಹಲಿಯಲ್ಲಿ ಸಂಘ ಹಾಗೂ ಶಾಲೆ ದೇಗುಲವಿದ್ದಂತೆ–ಪ್ರತಿಯೊಬ್ಬ ದೆಹಲಿ ಕನ್ನಡಿಗರೂ ಈ ಸಂಸ್ಥೆಗಳಿಗೆ ಗೌರವದಿಂದ ಕೈಲಾದ ಸೇವೆ ಮಾಡಬೇಕಾದದ್ದು ಕರ್ತವ್ಯ" ಎಂದು ದೆಹಲಿ ಕನ್ನಡಿಗರೊಡನೆ ಕಳೆದ ಸುಮಧುರ ಅನುಭವವನ್ನು ಹಂಚಿಕೊಂಡರು. "ಚುನಾವಣೆಯ ಸಲುವಾಗಿ ಕೆಲವೊಮ್ಮೆ ಭಿನ್ನಾಭಿಪ್ರಾಯಗಳು ಕೇವಲ ಕ್ಷಣಿಕ, ಕನ್ನಡಿಗರ ಪ್ರೀತಿ, ಅಭಿಮಾನ ಎಂದಿಗೂ ಶಾಶ್ವತ" ಎನ್ನುತ್ತಾ ಲೀಲಾ ಅಪ್ಪಯ್ಯ ತಮ್ಮ ಪ್ರೀತಿಪೂರ್ವಕ ಧನ್ಯವಾದಗಳನ್ನು ಸಮರ್ಪಿಸಿದರು.

"ಕೇವಲ ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾತ್ರ ನಡೆಸಿದರೆ ಸಾಲದು, ವಿದ್ಯಾರ್ಥಿಗಳ ಅವಶ್ಯಕತೆ ಹಾಗೂ ಪ್ರತಿಭೆಯನ್ನು ಗುರುತಿಸಿ ಅವರಿಗೆ ಸೂಕ್ತ ನೆರವಾಗುವುದೂ ಕೂಡಾ ಸಂಘದ ಪ್ರಮುಖ ಜವಾಬ್ದಾರಿ. ಇಂತಹ ಕಾರ್ಯ ಇನ್ನೂ ಹೆಚ್ಚಿನ ರೀತಿಯಲ್ಲಿ ನಿರಂತರವಾಗಿ ಸಾಗುತ್ತಿರಲಿ" ಎಂದು ಟಿ.ಎಸ್. ಸತ್ಯನಾಥ್ ಅವರು ಆಶಿಸಿದರು.

ಐ. ರಾಮಮೋಹನ ರಾವ್ ಅವರು ಹಿರಿಯರ ಸೇವೆಯನ್ನು ಗುರುತಿಸಿ, ಗೌರವಿಸುವ ಸತ್ಸಂಪ್ರದಾಯವನ್ನು ಸಂಘ ಪಾಲಿಸಿಕೊಂಡು ಬರುತ್ತಿರುವುದು ನಿಜಕ್ಕೂ ಹೆಮ್ಮೆಯ ಹಾಗೂ ಸಂತಸದ ಸಂಗತಿ ಎನ್ನುತ್ತಾ ಸಂಘದ ಅಭಿವೃದ್ಧಿ, ಬೆಳವಣಿಗೆಯನ್ನು ಮನಸಾರೆ ಶ್ಲಾಘಿಸಿದರು. ಸತ್ಕಾರ್ಯಗಳ ಮೂಲಕ ಸಂಘ ರಾಷ್ಟ್ರದ ರಾಜಧಾನಿಯಲ್ಲಿ ಕರ್ನಾಟಕದ ಕೀರ್ತಿ ಪತಾಕೆಯನ್ನು ಹಾರಿಸಲಿ ಎಂದು ಶುಭ ಹಾರೈಸುತ್ತಾ ವಿಶಿಷ್ಟ ಕನ್ನಡಿಗ ಪ್ರಶಸ್ತಿ ವಿಜೇತರಾದ ಎನ್.ಜೆ. ಕಾಮತ್, ಎಂ.ವೀರಪ್ಪ ಹಾಗೂ ಸುಮಿತ್ರಾ ರಾವ್ ಅವರನ್ನು ಅಭಿನಂದಿಸಿದರು.

ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರೂಪಿಸಿದರು ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

ಖ್ಯಾತ ಕಲಾವಿದ ಕೊಂಡದ ಕುಳಿ ಶ್ರೀ ರಾಮಚಂದ್ರ ಹೆಗಡೆ ಅವರನ್ನು ಸನ್ಮಾನಿಸಲಾಯಿತು. ಡಾ. ಪುರುಷೋತ್ತಮ ಬಿಳಿಮಲೆ, ಎಸ್. ಕೃಷ್ಣ ಭಟ್ ಹಾಗೂ ವಿದ್ಯಾ ಕೋಳ್ಯೂರು ಇವರುಗಳು ರಾಮಚಂದ್ರ ಹೆಗಡೆ ಅವರ ಕಲಾ ಪ್ರತಿಭೆಯನ್ನು ಪರಿಚಯಿಸಿದರು. ನಂತರ ಯಕ್ಷಗಾನದ ಕೆಲವು ಪ್ರಸಂಗಗಳ ವಿಭಿನ್ನ ಪಾತ್ರಗಳನ್ನು ರಾಮಚಂದ್ರ ಹೆಗಡೆ ಅವರು ಅದ್ಭುತವಾಗಿ ಅಭಿನಯಿಸಿದರು.

ನವೆಂಬರ್ 5,6 ರಂದು ಬೇಂದ್ರೆ ನೆನಪು, ನವೆಂಬರ್ 13ರಂದು ನಾಟಕ ಪ್ರದರ್ಶನ, ನವೆಂಬರ್ 19ರಂದು "ಕನ್ನಡವೇ ಶ್ರೇಷ್ಠ" ವಿಶಿಷ್ಟ ಸಾಂಸ್ಕೃತಿಕ ಕಾರ್ಯಕ್ರಮ, 20ರಂದು ಸುಗಮ ಸಂಗೀತ ಹಾಗೂ ಹಾಸ್ಯೋಲ್ಲಾಸ ಹಾಗೂ 26ರಂದು ನಡೆದ ಯಕ್ಷಗಾನ ಪ್ರದರ್ಶನ ಇಡೀ ಕರ್ನಾಟಕ ಸಾಂಸ್ಕೃತಿಕ ವೈಭವಗಳ ಕಿರುನೋಟ ದೆಹಲಿ ಕನ್ನಡಿಗರ ಮನದಾಳದಲ್ಲಿ ಅವಿಸ್ಮರಣೀಯ ಅನುಭವವಾಗಿ ನೆಲೆಯೂರಿತು.



ಅಭಿನಂದನೆಯನ್ನು ಸ್ವೀಕರಿಸುತ್ತಿರುವ ಪಿ.ಎನ್. ಅಪ್ಪಯ್ಯ ದಂಪತಿಗಳು



ಅಭಿನಂದನೆಯನ್ನು ಸ್ವೀಕರಿಸುತ್ತಿರುವ ಕೊಂಡದ ಕುಳಿ ರಾಮಚಂದ್ರ ಹೆಗಡೆ

*ಅಭಿಮತ : ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಪಡೆದ ತಮಗೆ ಸಮಸ್ತ ಹೊರನಾಡ ಕನ್ನಡಿಗರೆಲ್ಲರ ಪರವಾಗಿ ಹಾರ್ದಿಕ ಅಭಿನಂದನೆಗಳು. ಯಾವುದೇ ವ್ಯಕ್ತಿಯ ಸಾಧನೆಗೆ ಭದ್ರವಾದ ಬುನಾದಿ ಅತ್ಯವಶ್ಯಕ. ತಮ್ಮ ಬಾಲ್ಯ, ಪರಿಸರ, ಕುಟುಂಬ ಹಾಗೂ ವಿದ್ಯಾಭ್ಯಾಸ ಈ ಘಟ್ಟವನ್ನು ತಲುಪಲು ಹೇಗೆ ಸಹಕಾರಿಯಾಯ್ತು?*

## ವಿದ್ಯೆ ಇಲ್ಲದ ಜಾತಕ ಮತ್ತು ನನ್ನ ಶಾಲೆ

ಕಾರಣಾಂತರಗಳಿಂದ ನನ್ನ ಅಪ್ಪ ಆಗ ಬಳ್ಪದ ಸಮೀಪದ ಹೊಪ್ಪಳೆ ಎಂಬಲ್ಲಿದ್ದರಂತೆ. ಭಯಾನಕ ಬಡತನದ ಕಾಲವದು. ಅಂತ ಕೆಟ್ಟ ಕಾಲದಲ್ಲಿ ನಾನು ಒಂದು ಆದಿತ್ಯವಾರ, ಅಮಾವಾಸ್ಯೆಯ ದಿವಸ ರಣ ರಣ ಮಧ್ಯಾಹ್ನ ಜನಿಸಿದೆನಂತೆ. ನನ್ನ ತಂದೆ-ತಾಯಿಯರಿಗೆ ನಾನು ಮೂರನೇ ಮಗು, ಮೊದಲನೆಯದೆರಡು ಗಂಡಾಗಿದ್ದರಿಂದ ಸಹಜವಾಗಿ ಅವರಿಗೆ ಮೂರನೆಯದು ಹೆಣ್ಣಾಗಬೇಕೆಂಬ ಆಸೆ ಇದ್ದಿರಲೇಬೇಕು. ಆದರೆ ಅವರ ನಿರೀಕ್ಷೆಗೆ ಮೀರಿ, ಅವರ ಬಡತನಕ್ಕೆ ಕಳೆಯೇರಿಸುವಂತೆ, ಅದೂ ಅಮಾವಾಸ್ಯೆಯ ದಿನ ನಡು ಮಧ್ಯಾಹ್ನ ನಾನು ಹುಟ್ಟಿಬಿಟ್ಟೆ. ಹಾಗೆ ನಾನು ಹುಟ್ಟುವಾಗ ತಂದೆ-ತಾಯಿಯರಿಗೆ ಅವರದ್ದೇ ಆದ ನೆಲ, ಮನೆ, ಬದುಕು ಯಾವುದೂ ಇರಲಿಲ್ಲ. ಕರ್‍ರನೆ, ಕುಳ್ಳಗೆ, ಕುರೂಪದಲ್ಲಿ ಎಲ್ಲರನ್ನೂ ಮೀರಿಸುವಂತಿದ್ದ ನಾನು ತಂದೆ ತಾಯಿಯರ ಬಡತನವನ್ನು ತೀವ್ರವಾಗಿ ಹೆಚ್ಚಿಸಿದ್ದಿರಬೇಕು. ಇಂಥ ಪರಿಸ್ಥಿತಿಯಲ್ಲಿ ಹೀಗೆ ಹುಟ್ಟಿದ ಮಗುವಿನ ಭವಿಷ್ಯ ಹೇಗಿರಬಹುದೆಂಬ ಕುತೂಹಲದಿಂದ ತಂದೆಯವರು ಕೇರಳ ಕರ್ನಾಟಕ ಗಡಿಭಾಗದ ಜ್ಯೋತಿಷಿಯೊಬ್ಬನಿಂದ ನನ್ನ ಜಾತಕ ಬರೆಯಿಸಿದರು. ಆತ ಯಥಾಪ್ರಕಾರ ಹುಟ್ಟಿದ ಕ್ಷಣದ ಎಲ್ಲ ಗ್ರಹಗಳನ್ನು ಕರಾರುವಕ್ಕಾಗಿ ಕಂಡು ಹಿಡಿದು "ಈ ಜಾತಕನಿಗೆ ವಿದ್ಯಾಯೋಗ ವಿಲ್ಲವು" ಎಂದು ಬರೆದು, ಅಪ್ಪನಲ್ಲಿ ಇರುವಷ್ಟು ದುಡ್ಡನ್ನು ಕಿತ್ತುಕೊಂಡ.

ಈ ನಡುವೆ ಅಪ್ಪ ಹೊಪ್ಪಳೆ ಬಿಟ್ಟು ಮತ್ತೆಲ್ಲೋ ಹೋಗಿದ್ದರು. ನನ್ನ ಇಬ್ಬರು ಅಣ್ಣಂದಿರು (ಈಗ ಕಾರ್ಕಳದಲ್ಲಿರುವ ಪದ್ಮನಾಭ ಅಣ್ಣ ಮತ್ತು ಪಂಜದಲ್ಲಿರುವ ಪರಮೇಶ್ವರ ಅಣ್ಣ) ಗುತ್ತಿಗಾರಿನ ಕಮಿಲದಲ್ಲಿರುವ ನನ್ನ ಅಜ್ಜಿ ಮನೆ ಸೇರಿದರು. ಹಾಗೆ ಹೋದ ಅಣ್ಣಂದಿರ ಜೊತೆ ಮತ್ತೆ ಒಟ್ಟಿಗೆ ಬದುಕುವ ಭಾಗ್ಯ ನನಗೆ ಎಂದೂ ಬರಲೇಇಲ್ಲ. ನನಗೆ ನೆನಪು ಹುಟ್ಟಿದಾಗ ನಾವು ಏನೇಕಲ್ಲಿನಲ್ಲಿದ್ದೆವು. ಏನೇಕಲ್ಲಿನ ಹೊಳೆಯಲ್ಲಿ ಈಜುತ್ತಿದ್ದ, ಗಾಳ ಹಾಕಿ ಮೀನು ಹಿಡಿಯುತ್ತಿದ್ದ ದಿನಗಳು ನನಗಿನ್ನೂ ಚೆನ್ನಾಗಿ ನೆನಪಿವೆ. ಅಮ್ಮನ ಕಣ್ಣು ತಪ್ಪಿಸಿ ಏನೇಕಲ್ಲಿನ ಸೇತುವೆ (ನಾವಾಗ ಅದಕ್ಕೆ ಸಂಕ ಎನ್ನುತ್ತಿದ್ದೆವು) ಕಟ್ಟುವುದನ್ನು ನೋಡುವುದು ನನ್ನ ಆಗಿನ ಮಹಾ ಸಾಧನೆಗಳಲ್ಲಿ ಒಂದಾಗಿತ್ತು. ಮುಂದೆ ಏನೇಕಲ್ಲು ಬಿಟ್ಟು ಅಪ್ಪ ಅಮ್ಮ ಕೂತ್ಕುಂಜ ತಾಲೂಕಿನ ವಾಟೆಕಜೆ ಸೇರಿದರು. ವಾಟೆಕಜೆ ಬಂಟಮಲೆಗೆ ಸೇರಿದಂತಿರುವ ಕರಿಮಲೆಯ ಒಂದು ಸಣ್ಣ ಭಾಗ. ಅಲ್ಲಿ ದಟ್ಟವಾದ ಕಾಡು. ಇಡೀ ದಿನ ಯಾವುದೋ ಪ್ರಾಣಿಗಳ ಕೂಗು. ಅಲ್ಲಿದ್ದ ಒಂದು ಪುಟ್ಟ ಗುಡಿಸಲಲ್ಲಿ ನಮ್ಮ ವಾಸ. ರಾತ್ರಿಯಾದರೆ ವಾಟೆಕಜೆ ಇನ್ನೂ ಭಯಾನಕವಾಗಿ ಕಾಣುತ್ತಿತ್ತು. ಆಳುಪಕ್ಕಿ ಎಂಬ ಒಂದು ಬಗೆಯ ಹಕ್ಕಿ ಕೂಗಿದರೆ, ಅಮ್ಮ ನನ್ನನ್ನು ಸರಕ್ಕನೆ ಮನೆಯೊಳಗೆ ತಳ್ಳಿ ಬಾಗಿಲು ಹಾಕಿ 'ಏನೋ ಅನಾಹುತ ಕಾದಿದೆ' ಅಂತ ಇನ್ನಿಲ್ಲದ ಆತಂಕಕ್ಕೆ ಒಳಗಾಗುತ್ತಿದ್ದರು. ತಂಗಿ ಗುಲಾಬಿ (ಈಗ ಮಂಗಳೂರಿನಲ್ಲಿದ್ದಾಳೆ) ಆಗಿನ್ನೂ ಹುಟ್ಟಿರಲಿಲ್ಲವಾದ್ದರಿಂದ ನಾನು ಬಹುಮಟ್ಟಿಗೆ ಅಲ್ಲಿ ಏಕಾಂಗಿ. ವಾಟೆಕಜೆ ಹೊಳೆಯ ಬಳಿ ಕುಳಿತರೆ ವಟಗುಡುತ್ತಿದ್ದ ಕಪ್ಪೆಗಳು, ಸರಕ್ಕನೆ ನೀರಿನೊಳಕ್ಕೆ ಮಾಯವಾಗುವ ಏಡಿಗಳು, ಮೊರಂಟೆ ಮೀನುಗಳು, ತರಗೆಲೆಗಳ ಅಡಿಯಿಂದ ಪ್ರತ್ಯಕ್ಷವಾಗುತ್ತಿದ್ದ ಆಮೆಗಳು, ನನ್ನ ಆಗಿನ ಒಡನಾಡಿಗಳು. ಒಮ್ಮೊಮ್ಮೆ ಕಪ್ಪನೆಯ ಕಾಳಿಂಗ ಸರ್ಪಗಳು ಹೊಳೆಗೆ ನೀರುಕುಡಿಯಲು ಬರುತ್ತಿದ್ದುವು. ಮಳೆಗಾಲದಲ್ಲಿ ಬೀಸುವ ರಣಗಾಳಿಗೆ ನೆಲಕ್ಕೆ ಉರುಳುವ ಬೃಹತ್ ಮರಗಳು ಉಂಟುಮಾಡುವ ಶಬ್ದಕ್ಕೆ ಎದೆ ನಡುಗುತ್ತಿತ್ತು. ಹಾಗೆ ಬಿದ್ದ ಮರಗಳನ್ನು ನೋಡಲು ಅಪ್ಪ ಅಮ್ಮನ ಕಣ್ತಪ್ಪಿಸಿ ಕಾಡೊಳಕ್ಕೆ ನುಗ್ಗುವುದು ಸುಲಭದ ಮಾತಾಗಿರಲಿಲ್ಲ. ಮಳೆ ಬಿದ್ದಾಗ ಕಾಡಲ್ಲಿ ಕೊಳೆಯುತ್ತಿದ್ದ ಆ ಮರಗಳ ತೊಗಟೆಗಳಿಂದ ಹೊರಬರುವ ವಿಚಿತ್ರಾಕಾರದ ಹುಳುಗಳು ನನ್ನ ಸ್ನೇಹಿತರಾಗಿರಲಿಲ್ಲ, ಆದರೆ ವಿರೋಧಿಗಳೂ ಆಗಿರಲಿಲ್ಲ. ಮನುಷ್ಯರೇ ಇಲ್ಲದ ಆ ಊರಿನಲ್ಲಿ ಅಂತಹ ಹುಳುಗಳನ್ನು ಬಿಟ್ಟು ನಾನು ಬದುಕುವಂತೆಯೂ ಇರಲಿಲ್ಲ. ಅಮ್ಮ ಕಾಡೊಳಗೆ ಊಟಕ್ಕಾಗಿ ಬಿದಿರಕ್ಕಿ (ಬಿದಿರಿನಿಂದ ಬೀಳುವ ಭತ್ತವನ್ನು ತಂದು ಅಕ್ಕಿ ಮಾಡಿ ಊಟ ಮಾಡಲಾಗುತ್ತದೆ. ಅಮ್ಮ ಅದನ್ನು ರಾಜನಕ್ಕಿ ಎಂದು ಕರೆಯುತ್ತಿದ್ದರು) ಹೆಕ್ಕುವಾಗ ಹುಳುಗಳೊಡನೆ ಹರಟೆ ಹೊಡೆಯುವುದು ನನ್ನ ಹವ್ಯಾಸ. ಹಾಗೆ ನಾಲ್ಕೈದು ವರ್ಷ ಕಳೆಯಿತು. ಈ ಅವಧಿಯಲ್ಲಿ ಅಪ್ಪ ಅಮ್ಮನ ಹೊರತು ನಾನು ನೋಡಿದ ಮೂರನೇ ಮುಖವೆಂದರೆ ಕಾಡು ನೋಡಲು ಬರುತ್ತಿದ್ದ ಗಾರ್ಡನೊಬ್ಬನದು. ಅವನ ತಲೆ ಕಂಡೊಡನೆ ನಾನು ಎಲ್ಲೋ ತರೆಮರೆಸಿಕೊಳ್ಳುತ್ತಿದ್ದೆ. ಯಾಕೆಂದರೆ ನಾನು ಗಲಾಟೆ ಮಾಡುತ್ತಿದ್ದಾಗ ಅಮ್ಮ ಹೆದರಿಸುತ್ತಿದ್ದುದು–'ಅದೋ ಗಾರ್ಡು ಬಂದ, ಅವನಿಗೆ ಕೊಟ್ಟುಬಿಡುತ್ತೇನೆ'. ನಿಧಾನವಾಗಿ ಗಾರ್ಡನ ಹೆದರಿಕೆ ಕಡಿಮೆಯಾದಾಗ, ನಾನು ಮನೆಯಲ್ಲಿ ಕಾಣಿಸಿಕೊಳ್ಳುತ್ತಿದ್ದೆ. ಆಗ ಅಮ್ಮ ಆಕೆಯ ಯಾವುದೋ ಹಳೆಯ ಸೀರೆಯ ಅಂಚನ್ನು ಹರಿದು, ಲಂಗೋಟಿ ಮಾಡಿ ನನ್ನನ್ನು ಅಂಗಳದಲ್ಲಿ ಕಾಣಿಸುತ್ತಿದ್ದಳು. ಪುಣ್ಯಾತ್ಮ ಗಾರ್ಡನೊಬ್ಬನಿಂದಾಗಿ ನನಗೆ ಲಂಗೋಟಿ ಲಭ್ಯವಾದ್ದರಿಂದ ಅವನ ಬಗ್ಗೆ ನನಗೆ ಆದರವೂ ಮೂಡಿತ್ತು.

ನಮ್ಮ ತಂದೆಗೆ ಯಕ್ಷಗಾನ ನೋಡುವ, ಅದರಲ್ಲಿ ವೇಷ ಹಾಕುವ, ತಾಳಮದ್ದಳೆಯಲ್ಲಿ ಅರ್ಥ ಹೇಳುವ ಹುಚ್ಚಿತ್ತು. ಬಳ್ಪದ ಅಮ್ಮಣ್ಣಾಯರು, ಕಡಬ ಶಾಂತಪ್ಪ ಮೊದಲಾದವರು ನನ್ನ ಪ್ರೇರಕ ಶಕ್ತಿಯಾಗಿದ್ದರು ಅಂತ ಅಪ್ಪ ಕೊನೆವರೆಗೂ ಹೇಳುತ್ತಿದ್ದರು. ಒಮ್ಮೊಮ್ಮೆ ಯಕ್ಷಗಾನ, ತಾಳಮದ್ದಳೆ ಅಂತ ವಾಟೆಕಜೆ ಬಿಟ್ಟುಹೋದರೆ ವಾರಗಟ್ಲೆ ಅಪ್ಪ ಮನೆಗೆ ಬರುತ್ತಿರಲಿಲ್ಲ. ಆಗ ಆ ಭಯಾನಕ ಕಾಡಿನ ನಡುವೆ ನಾನು ಮತ್ತು ಅಮ್ಮ ಇಬ್ಬರೇ. ಆದರೆ ಮನೆಗೆ ಬಂದಾಗಲೆಲ್ಲ ಅಪ್ಪ ಊರಿನ ಕತೆ ಹೇಳುತ್ತಿದ್ದರು. ಯಕ್ಷಗಾನದಿಂದಾಗಿ ಅವರ ಲೋಕಜ್ಞಾನ ಸಾಕಷ್ಟು ವಿಸ್ತಾರವಾಗಿತ್ತು. ಹೀಗಾಗಿ ಮಗ ಚೆನ್ನಾಗಿ ಓದಿದರೆ, ಭಯಾನಕ ಬಡತನ ಮತ್ತು ಶೋಷಣೆಗಳಿಂದ ಪಾರಾಗಿಬಿಡಬಹುದು ಎಂಬ ತಿಳುವಳಿಕೆ ಅವರಿಗಿತ್ತು. ಆದರೇನು ಮಾಡೋಣ? ಅಮಾವಾಸ್ಯೆಯಲ್ಲಿ ಹುಟ್ಟಿದ ನನ್ನ ಜಾತಕದಲ್ಲಿ ವಿದ್ಯಾಯೋಗ ಇಲ್ಲವೆಂದು ಬರೆದಾಗಿದೆಯಲ್ಲ? ಆದರೆ ಕಾಡೊಳಗಿದ್ದ ನನ್ನ ಅಮ್ಮನ ತರ್ಕ ಯಾವಾಗಲೂ ಬೇರೆ. 'ಜಾತಕ ಹೇಗಾದರೂ ಇರಲಿ, ನಾವು ಮಾಡುವ ಪ್ರಯತ್ನ ಮಾಡಲೇಬೇಕು' ಎಂಬುದು ಅವಳ ವಾದ. ಹಾಗೂ ಹೀಗೂ ಐದು ವರ್ಷ ಕಳೆದು ಆರನೇ ವರ್ಷಕ್ಕೆ ಕಾಲಿಡುವಾಗ ಮಗನನ್ನು ಶಾಲೆಗೆ ಸೇರಿಸುವುದೋ ಬಿಡುವುದೋ ಎಂಬ ಬಗ್ಗೆ ತಂದೆ-ತಾಯಿಯರ ನಡುವೆ ಸಾಕಷ್ಟು ವಾದ-ವಿವಾದ ಬೆಳೆದು ಕೊನೆಗೂ ಶಾಲೆಗೆ ಸೇರಿಸುವುದೆಂದು ನಿರ್ಧರಿಸಲಾಯಿತು. ಈ ವಾದ ವಿವಾದಗಳೆಲ್ಲ ನನಗಿನ್ನೂ ನೆನಪಿದೆ. ಆದರೆ ಶಾಲೆ ಹತ್ತಿರವೇನೂ ಇರಲಿಲ್ಲ. ಇಲ್ಲಿಂದ ಸುಮಾರು ಮೂರು ಕಿ.ಮೀ. ದೂರ ಕಾಡಿನೊಳಗೆ ಜಿಗಣೆಗಳ ಕಾಟ ತಾಳಿಕೊಂಡು ವಾಟೆಕಜೆ ಹೊಳೆಯ ಬದಿಯಲ್ಲಿ ಇಳಿಯುತ್ತಾ , ಜಾರಿ ಬೀಳದಂತೆ ಜಾಗ್ರತೆ ವಹಿಸಿಕೊಂಡು ನಡೆಯಬೇಕು. ಆಮೇಲೆ ಅದೇ ಹೊಳೆಯನ್ನು ನಿರ್ದಿಷ್ಟ ಜಾಗವೊಂದರಲ್ಲಿ ದಾಟಬೇಕು. ಹಾಗೆ ದಾಟುವಾಗ ಹೊಳೆಯ ನಡುವಣ ಬಂಡೆಗಳನ್ನು ಚಾಕಚಕ್ಯತೆಯಿಂದ ಹಾರಬೇಕು. ಹೀಗೆ ಹೊಳೆದಾಟಿ ಮತ್ತೆ ಸುಮಾರು ಒಂದೆರಡು ಕಿಲೋಮೀಟರ್ ಮುಂದೆ ಹೋದರೆ ಕರ್ಮಜೆ ಎಂಬ ಊರು ಸಿಗುತ್ತದೆ. ಕರ್ಮಜೆ ತಲುಪಿದ ಮೇಲೆ ಅಲ್ಲಿ ಇಲ್ಲಿ ಕೆಲವು ಮನುಷ್ಯರು ಕಂಡರೂ ಕಾಣಬಹುದು. ಮುಂದೆ ಹೆಬ್ಬಾರ ಹಿತ್ಲು ಬರುತ್ತದೆ. ಅಲ್ಲಿಂದ ಮುಂದೆ ಗುಡ್ಡೆ ಏರಿದರೆ, ಸಮತಟ್ಟಾದ ಜಾಗವೊಂದರಲ್ಲಿ ಬೆಣಚು ಕಲ್ಲುಗಳ ನಡುವೆ ಕೂತ್ಕುಂಜ ಶಾಲೆ. ಅಂದರೆ ವಾಟೆಕಜೆಯಿಂದ ಏನಿಲ್ಲವೆಂದರೂ ಆರು ಕಿಮೀ ನಡೆಯಬೇಕು. ಆ ಶಾಲೆಗೆ ಸೇರಿಸುವ ಅಪ್ಪ ಅಮ್ಮನ ಮಾತು ಕೇಳಿ ನನಗೆ ಸಂಕೋಚ, ಭಯ, ಕುತೂಹಲ ಮತ್ತು ಆಸೆ ಎಲ್ಲ ಉಂಟಾಯಿತು. ಹುಳುಗಳನ್ನು ಬಿಟ್ಟು ಬೇರೆ ಮನುಷ್ಯರನ್ನು ನೋಡಲು ಸಾಧ್ಯವಾಗುವ ಏಕೈಕ ಸ್ಥಳವಾದ ಆ ಶಾಲೆಯ ಬಗ್ಗೆ ನಾನು ಏನೇನು ಯೋಚಿಸುತ್ತಿದ್ದೆನೋ ಈಗ ಬರೆಯಲಾರೆ.

ಸರಿ. ಶಾಲೆಗೆ ಹೊರಡುವ ಸಕಲ ಸಿದ್ಧತೆಗಳಾದವು. ಜೂನ್ ತಿಂಗಳ ಒಂದು ಮುಂಜಾನೆ ಅಪ್ಪ ನನ್ನನ್ನು ಪಂಜ ಎಂಬ ನಾಲ್ಕಂಗಡಿಗಳ ಪೇಟೆಗೆ ಕರೆದೊಯ್ಯುವುದಾಗಿ ಹೇಳಿದರು. ನಾನು ಸಿದ್ಧನಾದೆ. ಅಪ್ಪ ವೇಗವಾಗಿ ನಡೆಯುತ್ತಿದ್ದರು. ಅವರನ್ನು ಹಿಂಬಾಲಿಸಲು ನಾನು ಆಗಾಗ ಓಡಬೇಕಾಗಿತ್ತು. ಬಂಟಮಲೆಯ ಸೆರಗಿನಿಂದ ಇಳಿದು, ಕಕ್ಯಾನ ದಾಟಿ, ಪೂನಡ್ಕದಲ್ಲಿ ಕುಪ್ಪಳಿಸಿ, ಜಳಕದ ಹೊಳೆದಾಟಿ, ದೇವಸ್ಥಾನ ಗುಡ್ಡೆ ಹತ್ತಿ ಇಳಿದು, ಕುದ್ವದ ಗದ್ದೆ ಹುಣಿಗಳನ್ನು ದಾಟಿ ಮುಂದೆ ಹೋದಾಗ ದೂರದಿಂದ ಪಂಜ ಕಾಣಿಸಿತು. ಆ ಪೇಟೆಯೇ ಆಗಿನ ನನ್ನ ಮಾಯಾನಗರಿ. ಮಧ್ಯದಲ್ಲಿ ಕೆಂಪನೆಯ ಕೆಸರು ತುಂಬಿದ ರಸ್ತೆ. ಆದರ ಎಡ ಬಲಗಳಲ್ಲಿ ಒಂದೆರಡು ಅಂಗಡಿಗಳು. ಅಲ್ಲಿಯ 'ಮರಿಯಾ ಮಹಲ್' ಎಂಬ ಅಂಗಡಿಯಲ್ಲಿ ಕುಳಿತಿದ್ದ ದರ್ಜಿಯ ಬಳಿ ತಂದೆ ನನ್ನನ್ನು ಕರೆದೊಯ್ದರು. 'ಈತ ನನ್ನ ಮಗ, ಸದ್ಯ ಶಾಲೆ ಸೇರುವವನಿದ್ದಾನೆ. ಇವನಿಗೆ ಎಷ್ಟು ಸಲ ಹಾಕಿದರೂ ಹರಿದು ಹೋಗದಂಥ ದಪ್ಪ ಬಟ್ಟೆಯೊಂದರಿಂದ ಅಂಗಿಯೂ, ಅದಕ್ಕಿಂತ ಇನ್ನೂ ಸ್ವಲ್ಪ ದಪ್ಪದ ಬಟ್ಟೆಯಿಂದ ಚೆಡ್ಡಿಯೊಂದನ್ನು ಹೊಲಿದುಕೊಡಬೇಕೆಂದೂ' ಕೇಳಿಕೊಂಡರು. ಜೊತೆಗೆ ಈಗ ಸುಮಾರು 6 ಕಿ.ಮೀ. ದಿನನಿತ್ಯ ನಡೆದು ಚೀಲ ಹೆಗಲಿಗೇರಿಸಿಕೊಂಡು ಶಾಲೆಗೆ ಹೋಗಬೇಕಾಗಿರುವುದರಿಂದ ಅಂಗಿಯ ಹೆಗಲ ಭಾಗದಲ್ಲಿ ಅದು ಬೇಗ ಹರಿದು ಹೋಗಿ ಬಿಡುವ ಸಾಧ್ಯತೆ ಇರುವುದರಿಂದ, ಆ ಭಾಗಗಳಲ್ಲಿ ಒಂದೆರಡು ಪಟ್ಟಿ ಹೆಚ್ಚಿಗೆ ಇರಿಸಬೇಕೆಂದೂ ಹೇಳಿದರು. ಎಷ್ಟು ಮಣ್ಣಾದರೂ ಕಾಣಬಾರದೆಂಬ ಉದ್ದೇಶದಿಂದ ಮಣ್ಣಿನ ಬಣ್ಣದ ಬಟ್ಟೆಯನ್ನೇ ಆರಿಸಲಾಯಿತು. ದರ್ಜಿ ಅಳತೆ ತೆಗೆದ, ಕಿವಿಯಲ್ಲಿದ್ದ ಬಣ್ಣದ ಪೆನ್ಸಿಲ್ ತೆಗೆದು ಏನೇನೋ ಬರೆದುಕೊಂಡ. ಒಂದು ವಾರದ ಒಳಗೆ ಅಂಗಿ-ಚೆಡ್ಡಿ ಸಿದ್ಧವಾಗುತ್ತದೆ ಎಂದೂ ಹೇಳಿದ. ಅಪ್ಪ ಮತ್ತೆ ಹಿಂದೆ ಬರುತ್ತಾ ಸೋಡಾ ಶರಬತ್ ಕೊಡಿಸಿದರು, ಅಕ್ರೋಟ್ ಭಟ್ಟರ ಅಂಗಡಿಯಿಂದ ಅಕ್ರೋಟ್ ಕೊಡಿಸಿದರು. 'ಪರವಾಗಿಲ್ಲ ನನ್ನ ಅಪ್ಪ' ಅಂತ ಅಂದುಕೊಂಡೆ. ಪಂಜದಂತಹ ದೊಡ್ಡ ಪೇಟೆಯಲ್ಲಿ ಓಡಾಡುವ, ಅವರಿವರಿಂದ ನಮಸ್ಕಾರ ಗಿಟ್ಟಿಸುವ ಅಪ್ಪನ ಬಗ್ಗೆ ಭಾರೀ ಗೌರವವೂ ಮೂಡಿತು. ಮತ್ತೆ ಪಂಜದಿಂದ ಬಂಟಮಲೆಯ ಮಡಿಲು ಸೇರಿದಾಗ ಮಾಯಾನಗರಿ ಬಿಟ್ಟು ಬಂದ ವಿಷಾದ, ಜೊತೆಗೆ ಕಾಣಿಸಿದ ವಿವಿಧ ಬಗೆಯ ಮನುಷ್ಯರ ಚಿತ್ರಗಳು ನೆನಪಿನ ತುಂಬ. ಅಪ್ಪ ಎಷ್ಟು ದೊಡ್ಡ ಜನ ಎಂಬುದನ್ನು ಅಮ್ಮನಿಗೆ ವಿವರಿಸಿ ಹೇಳಿ, ಅಪ್ಪನ ಬಗ್ಗೆ ಆಕೆ ಹೆಮ್ಮೆಪಟ್ಟುಕೊಳ್ಳುವಂತೆ ಮಾಡಿದೆ.

ವಾರದ ಹೊತ್ತಿಗೆ ಅಪ್ಪ ಮತ್ತೆ ಆ ಜಾತಕ ಬರೆದ ಪುಣ್ಯಾತ್ಮನಲ್ಲಿಗೆ ಹೋಗಿ "ಹೇಗೂ ಮಗನಿಗೆ ವಿದ್ಯಾಯೋಗ ಇಲ್ಲ. ಆದರೂ ಜಾತಕ ನೋಡಿ ಒಳ್ಳೆ ದಿನ ಗೊತ್ತು ಮಾಡಿಕೊಡಿರಿ" ಎಂದು ಬೇಡಿಕೊಂಡ ಪ್ರಕಾರ ಆತ ಮತ್ತೆ ಗ್ರಹಗತಿ ಎಲ್ಲಾ ಲೆಕ್ಕ ಹಾಕಿ, ಆಗಸ್ಟ್ ತಿಂಗಳಲ್ಲಿ ಒಂದು ದಿನ ಗೊತ್ತು ಮಾಡಿಕೊಟ್ಟು, 'ಒಳ್ಳೆಯದಾಗಲಿ' ಎಂದು ಹರಸಿದ.

ನಿರೀಕ್ಷಿಸಿದಂತೆ ಶಾಲೆಗೆ ಸೇರುವ ಮುನ್ನಾ ದಿನ ಹೊಸ ಅಂಗಿ-ಚೆಡ್ಡಿ ಬಂತು. ಆದರೆ ಅದಕ್ಕೆ ಆತ ಇಸ್ತ್ರಿ ಮಾಡಿರಲಿಲ್ಲ. ಇಸ್ತ್ರಿ ಹಾಕಿದ ಅಂಗಿ ಹೇಗೆ ಗರಿ ಗರಿಯಾಗಿ ಇರುತ್ತದೆ ಎಂಬುದನ್ನು ಪಂಜದಲ್ಲಿ ನೋಡಿದ್ದ ನನಗೆ ಒಂದು ಉಪಾಯ ಹೊಳೆಯಿತು. ನಾನೇ ಅಂಗಿ-ಚೆಡ್ಡಿಗಳನ್ನು ಚೆನ್ನಾಗಿ ಮಡಚಿದೆ. ಪಂಜದಿಂದ ಆಗೀಗ ಅಪ್ಪ ತರುತ್ತಿದ್ದ ಆಗಣ 'ನವಭಾರತ' ಪತ್ರಿಕೆಯಲ್ಲಿ ಅದನ್ನು ಇರಿಸಿ, ಸ್ವಲ್ಪ ಸ್ಥೂಲಕಾಯರಾಗಿದ್ದ ಅಪ್ಪನನ್ನು ಅದರ ಮೇಲೆ ಕುಳಿತುಕೊಳ್ಳಲು ವಿನಂತಿಸಿಕೊಂಡೆ. ಅದಕ್ಕೊಪ್ಪಿದ ಅಪ್ಪ ಸಮಯ ಸಿಕ್ಕಾಗಲೆಲ್ಲ ಅದರ ಮೇಲೆ ಕುಳಿತು 'ಕುಂಡೆ ಇಸ್ತ್ರಿ'ಗೆ ಸಹಕರಿಸಿದ್ದರು. ಅಮ್ಮ ಅದಾವುದೂ ಹಳೆಯ ಕತ್ತರಿಯಿಂದ ನನ್ನ ನೆತ್ತಿ ಸಿಗಿಯುವ ಹಾಗೆ ಕೂದಲನ್ನು ಕತ್ತರಿಸಿದರು. 'ನಿನ್ನ ತಲೆ ಇಲಿ ತಿಂದಂತೆ ಕಾಣುತ್ತಿದೆ' ಅಂತ ಅಪ್ಪ ತಮಾಷೆ ಮಾಡುತ್ತಿದ್ದರು.


ಅಂತೂ ಸಕಲ ಸಿದ್ಧತೆಗಳೊಂದಿಗೆ ಆ ದಿನ ಶಾಲೆಗೆ ಹೊರಡಲು ಸಿದ್ಧವಾದೆ. ಎಲ್ಲಕ್ಕಿಂತ ಕಾತರ ಅಮ್ಮನದಾಗಿತ್ತು. 'ಮಗುವನ್ನು ಶಾಲೆವರೆಗೂ ಕೈ ಹಿಡಿದುಕೊಂಡು ಕರೆದುಕೊಂಡು ಹೋಗಬೇಕು. ಅವ ಹಿಂದೆ ಬರುವಾಗ ಹೊಳೆವರೆಗೆ ಬರಲಿ, ಹೊಳೆದಾಟಿಸಲು ನಾನಿದ್ದೇನೆ' ಅಂತ ಅಪ್ಪನಿಗೆ ಹೇಳುತ್ತಿದ್ದರು. ನಾನು ಹೊರಡಲು ಸಿದ್ಧವಾದೆ. ನವಭಾರತದ ಕಟ್ಟೊಳಗಿಂದ ಅಂಗಿ-ಚೆಡ್ಡಿಗಳನ್ನು ತೆಗೆಯತೊಡಗಿದ್ದಂತೆ ನನ್ನ ಕೈಕಾಲುಗಳೆಲ್ಲ ತಣ್ಣಗಾಗಿಬಿಟ್ಟಿತು. ಅಪ್ಪನ ಕುಂಡೆ ಇಸ್ತ್ರಿಯ ಪರಿಣಾಮವಾಗಿ ನವಭಾರತ ಪತ್ರಿಕೆಯ ಅಕ್ಷರಗಳೆಲ್ಲ ನನ್ನ ಹೊಸ ಅಂಗಿಯ ಮೇಲೆ ಅಕರಾಳ-ವಿಕರಾಳವಾಗಿ ಮೂಡಿ ಹೊಸ ವಿನ್ಯಾಸವೊಂದು ಸಿದ್ಧಗೊಂಡಿತ್ತು. ಬಳಬಳನೆ ಕಣ್ಣೀರು ಉರುಳತೊಡಗಿತು. ಮೆಲ್ಲನೆ ಅಂಗಿಯ ಮೇಲೆ ಕೈಯಾಡಿಸಿದೆ. ಪತ್ರಿಕೆಯ ಶಾಯಿ ಇನ್ನಷ್ಟು ಹರಡಿಕೊಂಡಿತು. "ನಿನ್ನ ಹಣೆಯಲ್ಲಿ ವಿದ್ಯೆ ಬರೆದಿಲ್ಲ" ಎಂಬ ಅಪ್ಪನ ಉದ್ಗಾರ ಸ್ವಲ್ಪ ಗಡುಸಾಗಿಯೇ ಕೇಳಿತು.

ಆ ದರ್ಜಿ ಅದೇನು ಅಳತೆ ತೆಗೆದಿದ್ದನೋ ತಿಳಿಯದು. ಆತ ಹೊಲಿದ ಅಂಗಿ ಮೊಣಕಾಲಿನವರೆಗೂ ಚಾಚಿಕೊಂಡು ನನ್ನ ಹೊಸ ಚೆಡ್ಡಿಯನ್ನು ಮುಚ್ಚಿ ಹಾಕಿತ್ತು. ಹೊಸ ಚೆಡ್ಡಿ ಹೊರಜಗತ್ತಿಗೆ ಕಾಣದಾದದ್ದರ ಬಗ್ಗೆ ನನಗೆ ತುಂಬ ಅಸಮಾಧಾವಾಯಿತು. ಆದರೆ ಅಪ್ಪ ಹೇಳಿದಂತೆ ಆತ ಅಂಗಿಯ ಭುಜದ ಭಾಗಕ್ಕೆ ಒಂದೆರಡು ಪಟ್ಟಿಗಳನ್ನು ಹೆಚ್ಚಿಗೆ ಸೇರಿಸಿದ್ದ. ಹಾಗಾಗಿ ಅದು ದಪ್ಪವಾಗಿ ಸುಮಾರಾಗಿ ನನ್ನ ಕಿವಿವರೆಗೆ ತಲುಪಿ ನಿಂತಿತ್ತು. ಒತ್ತಿದರೆ ಮೆತ್ತನಾಗುವ ಅದರ ಮೇಲೆ ಅಮ್ಮ ಕೊಟ್ಟ ಚೀಲ ಹೆಗಲಿಗೇರಿಸಿದೆ. ಮಳೆಗಾಲವಾದ್ದರಿಂದ ಅಮ್ಮ ನನ್ನ ಬೆನ್ನಿಗೆ ಗೊರಬೆಯೇರಿದರು. ಅದು ಅಮ್ಮನ ಗೊರಬೆಯಾದ್ದರಿಂದ ನನ್ನ ಸೈಜಿನದಾಗಿರಲಿಲ್ಲ. ಅಮ್ಮ ಗೊರಬೆಯ ಕೆಳಗಣ ಭಾಗವನ್ನು ಹರಿತವಾದ ಕತ್ತಿಯಿಂದ ಕತ್ತರಿಸಿ, ನನ್ನ ಎತ್ತರಕ್ಕೆ ಒಗ್ಗಿಸಲು ಪ್ರಯತ್ನಿಸಿದ್ದು ನಿಜ. ಆದರೂ ಆ ಗೊರಬೆ ತಲೆಯ ಮೇಲಿಂದ ಕೆಳಗಿನವರೆಗೆ ಚಾಚಿಕೊಂಡು ನಡೆದಾಗ ನೆಲಕ್ಕೆ ತಾಗಿ ಬರ ಬರನೆ ಸದ್ದು ಮಾಡುತ್ತಿತ್ತು. ಜೊತೆಗೆ ಕಾಡಲ್ಲಿ ನಡೆಯವಾಗ ಜಿಗಣೆಗಳು ಗೊರಬೆಯ ಮೂಲಕ ಸುಲಭವಾಗಿ ನನ್ನ ಬೆನ್ನೇರಬಹುದು. ನಾನು ಸ್ವಲ್ಪ ಬಗ್ಗಿದರೆ ಗೊರಬೆಯ ಹಿಂಭಾಗ ನೆಲದಿಂದ ಮೇಲೆದ್ದು ಸದ್ದು ಕಡಿಮೆಯಾಗುತ್ತಿತ್ತು, ಜಿಗಣೆಗಳಿಂದ ತಪ್ಪಿಸಿಕೊಳ್ಳಬಹುದಿತ್ತು. ಹೇಗೋ ಸುಧಾರಿಸಿಕೊಂಡು, ಒಂದು ಕೈಯಲ್ಲಿ ಬುತ್ತಿ, ಇನ್ನೊಂದು ಕೈಯಲ್ಲಿ ಮೈಮೇಲೇರುವ ಸಹಸ್ರ ಸಂಖ್ಯೆಯ ಜಿಗಣೆಗಳನ್ನು ಉದುರಿಸಲು ಬಟ್ಟೆಯಲ್ಲಿ ಕಟ್ಟಿಕೊಂಡ ಉಪ್ಪು, ಉಬ್ಬಿದ ಹೆಗಲ ಮೇಲೆ ಚೀಲ, ಸ್ವಲ್ಪ ಬಗ್ಗಿದ ಬೆನ್ನಿನ ಮೇಲೆ ಗೊರಬೆ ಇರಿಸಿಕೊಂಡು, ಅಪ್ಪನ ಹಿಂದೆ ಹೆಜ್ಜೆ ಹಾಕುತ್ತಾ ಸುಮಾರು 6 ಕಿ.ಮೀ. ನಡೆದು 12 ಗಂಟೆ ಸುಮಾರಿಗೆ ಕೂತ್ಕುಂಜ ಶಾಲೆಗೆ ತಲುಪಿದೆ.

ಜಾತಕ ಬರೆದ ಜೋಯಿಸರು ತಿಳಿಸಿದಂತೆ ಆ ದಿವಸ ಬಹಳ ಒಳ್ಳೆಯ ದಿವಸವಾಗಿತ್ತು. ಆ ಕಾರಣಕ್ಕಾಗಿಯೇ ಶಾಲೆಗೆ ರಜೆ ಸಾರಲಾಗಿತ್ತು! ಈ ಅನಿಷ್ಟಕ್ಕೆ ಬೆದರಿದ ಅಪ್ಪ ದಿಗ್ಭ್ರಾಂತರಾಗಿದ್ದರು. ಅವರಲ್ಲಿ ಮಾತಿರಲಿಲ್ಲ. ನನ್ನ ತಲೆ ಸವರಿ ಮತ್ತೆ ವಾಟೆಕಜೆಗೆ ಹಿಂದಿರುಗಲು ಹೇಳಿ, ಪಂಜದ ಕಡೆ ನಡೆದರು. ನಾನು ಬಂದ ದಾರಿಯಲ್ಲಿ ಹಿಂದೆ ಬಂದೆ. ಸಮಯಕ್ಕೆ ಮುನ್ನ ಒಂಟಿಯಾಗಿಯೇ ಮನೆಗೆ ಹಿಂದಿರುಗಿದ ನನ್ನನ್ನು ಕಂಡ ಅಮ್ಮನ ಕಣ್ಣಲ್ಲೂ ನೀರು.

ಈಗ ಅಪ್ಪ ಅಮ್ಮ ಇಬ್ಬರೂ ಇಲ್ಲ. ಜಾತಕ ಬರೆದ ಜೋಯಿಸರೂ ಇಲ್ಲ. ನನಗೆ ಇವನ್ನೆಲ್ಲ ಬರೆಯುವಷ್ಟು ವಿದ್ಯೆ ಸಿಕ್ಕಿದೆ. ಜಾತಕ ಅನಾಥವಾಗಿ ಬಿದ್ದುಕೊಂಡಿದೆ. ಯಾವಾಗಲಾದರೂ ಊರಿಗೆ ಹೋದಾಗ ಬಿಡುವು ಮಾಡಿಕೊಂಡು ಕರಿಮಲೆ ದಾಟಿ, ವಾಟೆಕಜೆ ಕಡೆ ಹೋಗಿ ಅಲ್ಲಿಯ ಹೊಳೆಯ ತಣ್ಣಗಿನ ನೀರಲ್ಲಿ ಕಾಲಾಡಿಸುವಾಗ ಗೊತ್ತಿಲ್ಲದೆ ಕಣ್ಣೀರು ತೊಟ್ಟಿಕ್ಕುತ್ತದೆ.

■ **ಡಾ. ಪುರುಷೋತ್ತಮ ಬಿಳಿಮಲೆ**



ಬಂಟಮಲೆ ಕಾಡು



ಪಂಜದ ಪೇಟೆ

# ಕೃಷಿಕ್ ಸರ್ವೋದಯ ಫೌಂಡೇಶನಿಂದ ಕನ್ನಡ ರಾಜ್ಯೋತ್ಸವ



ನವೆಂಬರ್ 16.2011ರಂದು ಕೃಷಿಕ್ ಸರ್ವೋದಯ ಫೌಂಡೇಶನ್ ದೆಹಲಿ ಶಾಖೆಯ 56ನೇ ಕನ್ನಡ ರಾಜ್ಯೋತ್ಸವವನ್ನು ಸಿವಿಲ್ ಸರ್ವೀಸಸ್ ಆಕಾಂಕ್ಷಿಗಳಿಂದ ಕಿಕ್ಕಿರಿದು ತುಂಬಿದ್ದ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಯುವ ಗಾಯಕ ನಿಶಾಂತ್ ಮತ್ತು ತಂಡದವರ ನಾಡಗೀತೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ರಾಜ್ಯೋತ್ಸವ ಆಚರಣೆಯ ಜೊತೆಗೆ ಐಎಎಸ್ ಅಧಿಕಾರಿಗಳು ಮತ್ತು ಸಿವಿಲ್ ಸರ್ವೀಸಸ್ ಆಕಾಂಕ್ಷಿಗಳ ಮುಖಾಮುಖಿ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸತತ ಮೂರು ವರ್ಷಗಳಿಂದ ಈ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿದ್ದು ಈ ವರ್ಷವೂ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರ ಉದ್ದೇಶ ಕರ್ನಾಟಕದ ಸಿವಿಲ್ ಸರ್ವಿಸ್ ಆಕಾಂಕ್ಷಿಗಳಿಗೆ ಮಾರ್ಗದರ್ಶನ, ಆತ್ಮ ಸ್ಥೈರ್ಯ ತುಂಬುವುದರ ಜೊತೆಗೆ ಅಣಕು ಸಂದರ್ಶನಗಳ ಮೂಲಕ ತರಬೇತಿ ನೀಡಿ ಅತಿ ಹೆಚ್ಚು ಕನ್ನಡದ ಆಕಾಂಕ್ಷಿಗಳು ಸಫಲರಾಗುವಂತೆ ಮಾಡುವುದಾಗಿದೆ.

ಈ ತರಬೇತಿ ಕಾರ್ಯದ ಮುಖ್ಯ ರುವಾರಿ ಹಿರಿಯ ಐಎಎಸ್ ಅಧಿಕಾರಿಗಳಾದ ಶ್ರೀಯುತ ಸಿ.ಎಸ್. ಕೇದಾರ್ ಮತ್ತು ಅವರ ತಂಡ. ಇಲ್ಲಿಯವರೆಗೆ ಇದರ ಸದುಪಯೋಗ ಪಡೆದ ಕರ್ನಾಟಕದ 54 ಆಕಾಂಕ್ಷಿಗಳು ಈಗಾಗಲೇ ಸಿವಿಲ್ ಸರ್ವೀಸ್‌ಗಳಾದ ಐಎಎಸ್., ಐಪಿಎಸ್, ಐಆರ್‌ಎಸ್ ಮುಂತಾದ ಸೇವೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಮುಖಾಮುಖಿ ಕಾರ್ಯಕ್ರಮದಲ್ಲಿ ಹಿರಿಯ ಅಧಿಕಾರಿಗಳಾದ ಶ್ರೀ ಸಿ.ಎಸ್. ಕೇದಾರ್, ಐ.ಎ.ಎಸ್, ಮಿಸ್ ಅಮಿಕ ಕೌಲ್, ಐ.ಎ.ಎಸ್, ಶ್ರೀ ಘನಶ್ಯಾಂ, ಐ.ಎಫ್.ಎಸ್., ಶ್ರೀ ಕೃಪಾನಿಧಿ, ಐ.ಡಿ.ಎಸ್., ಶ್ರೀ ಟಿ.ಎಂ. ವಿಜಯ ಭಾಸ್ಕರ್ ಐ.ಎ.ಎಸ್, ಶ್ರೀ ಅತುಲ್ ಕುಮಾರ್ ತಿವಾರಿ ಐಎಎಸ್, ಡಾ. ಪುರುಷೋತ್ತಮ ಬಿಳಿಮಲೆ, ಶ್ರೀಮತಿ ಧನಲಕ್ಷ್ಮೀ, ಐಎಎಸ್., ಶ್ರೀ ದರ್ಶನ್ ಗೌಡ ಐಆರ್‌ಎಸ್. ಇವರುಗಳು ಭಾಗವಹಿಸಿದ್ದರು. ತಮ್ಮ ಅನುಭವದ ಸಾರವನ್ನು ಆಕಾಂಕ್ಷಿಗಳಿಗೆ ತಿಳಿಸುತ್ತಾ ದೆಹಲಿಯ ವಿಪರೀತದ ಹವಾಮಾನಕ್ಕೆ ಹೊಂದಿಕೊಂಡು ತಮ್ಮ ಗುರಿಯನ್ನು ಸಾಧಿಸುವತ್ತ ಗಮನಹರಿಸಬೇಕು ಎಂದು ತಿಳಿಸಿದರು. ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ ಜೀವನದ ಅನುಭವವನ್ನು ತಿಳಿಸುತ್ತ ಯಾವ ಜೋತಿಷ್ಯವೂ ಮನುಷ್ಯನ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ನಮಗೆ ನಾವು ಕಷ್ಟಪಟ್ಟು ಹಿಡಿದುದನ್ನು ಸಾಧಿಸಿದಾಗ ಮಾತ್ರ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯ, ಎಲ್ಲವು ನಮ್ಮ ಕೈಯಲ್ಲೇ ಇದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದ ಸದುಪಯೋಗವನ್ನು 226 ವಿದ್ಯಾರ್ಥಿಗಳು ಪಡೆದರು.

ಕಾರ್ಯಕ್ರಮದ ನಿರೂಪಣೆಯನ್ನು ಕೃಷಿಕ್ ಸರ್ವೋದಯ ಫೌಂಡೇಶನ್ ನವದೆಹಲಿ ಶಾಖೆಯ ಕಾರ್ಯದರ್ಶಿ ಶ್ರೀ ವಿ.ಆರ್. ಗುಡ್ಡೇಗೌಡರು ನಿರ್ವಹಿಸುತ್ತ ಬಂದಿದ್ದ ಅತಿಥಿಗಳಿಗೆ ಸ್ವಾಗತ ಕೋರಿದರು. ಖಜಾಂಚಿ ಶ್ರೀ ಕೆ. ಶಿವರಾಂ ಅತಿಥಿಗಳಿಗೆ ಪುಷ್ಪಗುಚ್ಛ ನೀಡಿ ಗೌರವಿಸಿದರು. ಜಂಟಿ ಕಾರ್ಯದರ್ಶಿ ಶ್ರೀ ಪಿ.ಸಿ. ಶ್ರೀನಿವಾಸ್ ವಂದನಾರ್ಪಣೆ ಮಾಡಿದರು.

■ ಎಸ್.ಸಿ. ಹೇಮಲತ

# ಕಥೆಗಾರ ಅಬ್ದುಲ್ ರಶೀದ್ ಸಂಘಕ್ಕೆ ಭೇಟಿ



ನವದೆಹಲಿಯಲ್ಲಿ ನವೆಂಬರ್ 2ರಿಂದ ಆರಂಭವಾಗಲಿದ್ದ ಎಬಿಯು (ಏಷ್ಯಾ ಪೆಸಿಫಿಕ್ ಬ್ರಾಡ್ ಕಾಸ್ಟಿಂಗ್ ಯೂನಿಯನ್) ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಲು ಆಗಮಿಸಿದ್ದ ಕಥೆಗಾರ, ಆಕಾಶವಾಣಿ ಮಡಿಕೇರಿ ಕೇಂದ್ರದಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿರುವ ಅಬ್ದುಲ್ ರಶೀದ್ ದೆಹಲಿ ಕರ್ನಾಟಕ ಸಂಘಕ್ಕೆ ಆಗಮಿಸಿದ್ದರು.

ಈ ಸಮಾವೇಶದಲ್ಲಿ ವಿಶ್ವದ ಐವತ್ತೆಂಟು ದೇಶಗಳ ರೇಡಿಯೋ ಹಾಗೂ ದೂರದರ್ಶನ ಮಾಧ್ಯಮಗಳ ಪ್ರತಿನಿಧಿಗಳು ಭಾಗವಹಿಸಲಿದ್ದು, ಅಬ್ದುಲ್ ರಶೀದ್‌ರವರು "ಸ್ಥಳೀಯ ರೇಡಿಯೋ ಕೇಂದ್ರಗಳಿಂದ ಕೇಳುಗರು ಏನು ಬಯಸುತ್ತಾರೆ" ಎಂಬ ವಿಷಯದ ಕುರಿತು ತಮ್ಮ ಅನಿಸಿಕೆಗಳನ್ನು ಸಮಾವೇಶದಲ್ಲಿ ಮಂಡಿಸಿದ್ದರು.

ಅವರೊಂದಿಗೆ ದೆಹಲಿಯ ಚಳಿಸುಳಿಗಾಳಿಯ ಸಂಜೆಯ ಕಾಫಿ ಜತೆ ಲಘು ಹರಟೆಯಲ್ಲಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಬೇಂದ್ರೆ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಆಗಮಿಸಿದ್ದ ಕನ್ನಡದ ಹೆಸರಾಂತ ಕವಿ ಡಾ. ಎಚ್.ಎಸ್. ವೆಂಕಟೇಶಮೂರ್ತಿ, ಡಾ. ಪುರುಷೋತ್ತಮ ಬಿಳಿಮಲೆ, ಟಿ.ಎಸ್. ಸತ್ಯನಾಥ್, ವೈ. ಅವನೀಂದ್ರನಾಥ್ ರಾವ್, ರೇಣುಕಾ ನಿಡಗುಂದಿ ಮುಂತಾದವರು ಉಪಸ್ಥಿತರಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ, 'ಕೆಂಡಸಂಪಿಗೆ' ವೆಬ್ ತಾಣದ ಗೌರವ ಸಂಪಾದಕರಾಗಿರುವ ಅಬ್ದುಲ್ ರಶೀದ್ ಅವರಿಗೆ ಡಾ.ಎ.ಚ್.ಎಸ್.ವೆಂಕಟೇಶಮೂರ್ತಿ ಹೂಗುಚ್ಛ ನೀಡಿ ಸ್ವಾಗತಿಸಿದರು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.



# ಕರ್ನಾಟಕ ಭವನದಿಂದ ರಾಜ್ಯೋತ್ಸವ ಕಾರ್ಯಕ್ರಮ ಆಚರಣೆ




ನವೆಂಬರ್ ಒಂದರಂದು ದೆಹಲಿಯ ಕರ್ನಾಟಕ ಭವನದ, ವತಿಯಿಂದ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 56ನೇ ಕರ್ನಾಟಕ ರಾಜ್ಯೋತ್ಸವವನ್ನು ಔಚಿತ್ಯಪೂರ್ಣವಾಗಿ ಆಚರಿಸಲಾಯಿತು. ಶ್ರೀ. ವಿ. ಧನಂಜಯ ಕುಮಾರ್, ವಿಶೇಷ ಪ್ರತಿನಿಧಿಗಳು, ಕರ್ನಾಟಕ ಸರ್ಕಾರ ಇವರು ಸಾಂಸ್ಕೃತಿಕ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು, ಶ್ರೀ ಬೈಕೆರೆ ನಾಗೇಶ್, ಅಪರ ವಿಶೇಷ ಪ್ರತಿನಿಧಿಗಳು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ಶ್ರೀ ವೆಂಕಟಾಚಲ ಹೆಗಡೆ, ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದರು. ಶ್ರೀಮತಿ ವಂದನಾ ಗುರ್‌ನಾನಿ, ಐ.ಎ.ಎಸ್., ನಿವಾಸಿ ಆಯುಕ್ತರು, ಕರ್ನಾಟಕ ಭವನ, ಶ್ರೀಮತಿ ಇಮ್‌ಕೊಂಗ್ಲಾ ಜಮೀರ್, ಐ.ಎ.ಎಸ್., ಅಪರ ನಿವಾಸಿ ಆಯುಕ್ತರು, ಶ್ರೀ. ವೆಂಕಟೇಶ್ ಕಡಗದ ಕೈ, ಉಪ ನಿವಾಸಿ ಆಯುಕ್ತರು ಕರ್ನಾಟಕ ಭವನ ಮತ್ತು ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮತ್ತು ಕುಟುಂಬವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸ್ವಾಗತ ಭಾಷಣವನ್ನು ಕರ್ನಾಟಕ ಭವನದಲ್ಲಿ ಹಲವಾರು ವರ್ಷಗಳಿಂದ ವ್ಯವಸ್ಥಾಪಕರಾಗಿ ಸೇವೆ ಮಾಡುತ್ತಿರುವ ಪಂಜಾಬಿನವರಾದ ಶ್ರೀ.ಜೋಗಿಂದರ್ ಸಿಂಗ್ ವಾಲಿಯಾ ಅವರು ಕನ್ನಡದಲ್ಲಿ ಮಾಡಿದ್ದು ಈ ಸಾಲಿನ ದೆಹಲಿಯ ಕರ್ನಾಟಕ ರಾಜ್ಯೋತ್ಸವದ ಒಂದು ವೈಶಿಷ್ಟ್ಯವೇ ಸರಿ. ಶ್ರೀಮತಿ ವಂದನಾ ಗುರ್‌ನಾನಿ, ಅವರ ನೇತೃತ್ವದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವು ತುಂಬಾ ಅಚ್ಚುಕಟ್ಟಾಗಿ ಮತ್ತು ಸೊಗಸಾಗಿ ಮೂಡಿಬಂದಿತು. ಇದೇ ಸಂದರ್ಭದಲ್ಲಿ ಕರ್ನಾಟಕ ಭವನದ ಸಿಬ್ಬಂದಿಗಳು ಮತ್ತು ಅವರ ಕುಟುಂಬವರ್ಗದವರಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಸಾಂಸ್ಕೃತಿಕ ಕಾರ್ಯಕ್ರಮವು ಕರ್ನಾಟಕ ಭವನದ ಸಿಬ್ಬಂದಿಗಳು ಹಾಡಿದ ನಾಡಗೀತೆಯೊಂದಿಗೆ ಪ್ರಾರಂಭವಾಯಿತು. ಆ ನಂತರದಲ್ಲಿ ಶ್ರೀ ಎಸ್.ಕುಮಾರ್, ಶ್ರೀ.ಗೋವಿಂದರಾಜ್, ಶ್ರೀಮತಿ ಪೂಜಾರಾವ್, ಕುಮಾರಿ ಪ್ರೇರಣಾ, ಶ್ರೀ ಪ್ರವೀಣ್ ಕುಮಾರ್, ಶ್ರೀಮತಿ ನೇತ್ರಾವತಿ ಕುಮಾರ್ ಇವರುಗಳ ಹಲವಾರು ಕನ್ನಡ ಗೀತೆಗಳು ಮತ್ತು ದೇಶಭಕ್ತಿ ಗೀತೆಗಳು ಕೇಳುಗರಿಗೆ ದೇಶಾಭಿಮಾನವನ್ನು ಉಕ್ಕಿಸುವಂತಿತ್ತು. ನಂತರ ಮೂಡಿಬಂದ ಪುಟ್ಟ ಮಕ್ಕಳ ಛದ್ಮ ವೇಷ ಸ್ಪರ್ಧೆ ಸುಂದರವಾಗಿತ್ತು. ಕೊನೆಯದಾಗಿ ಕರ್ನಾಟಕ ಭವನದ ಸಿಬ್ಬಂದಿಗಳಿಂದ ಮೂಡಿಬಂದ "ಬುದ್ಧಿವಂತ" ಎಂಬ ಕಿರುನಾಟಕವು ಅಮೋಘವಾಗಿತ್ತು. ಈ ನಾಟಕವು ಇಂದಿನ ಯಾಂತ್ರಿಕ / ಕೃತಕ ಜೀವನದಲ್ಲಿ ಧನ ಸಂಪಾದನೆಯೊಂದನ್ನೇ ಜೀವನದ ಧ್ಯೇಯವನ್ನಾಗಿರಿಸಿಕೊಂಡು ಪರಮಾತ್ಮನ ಮರೆಯುತ್ತಿರುವ ಜನರಿಗೆ ಒಂದು ಉತ್ತಮ ಸಂದೇಶವನ್ನು ನೀಡುವಂತಿತ್ತು. ರಾಜನಾಗಿ ಶ್ರೀ ನಾರಾಯಣ.ಬಿ, ಮಂತ್ರಿಯಾಗಿ ಶ್ರೀ ಎಸ್.ಕುಮಾರ್. ಡಂಗೂರ ಸಾರುವವನಾಗಿ ಹೆಚ್.ಎಸ್ ಜಗದೀಶ್, ಮೂರ್ಖನಾಗಿ ಶ್ರೀ ಅಂಬರೀಶ್, ರಾಜ ವೈದ್ಯನಾಗಿ ಶ್ರೀ ಸುಧೀರ್ ಕುಮಾರ್, ಸೈನಿಕರಾಗಿ ಶ್ರೀ. ಬಸವಣ್ಣಿ ಹುಂಡ್ರಿ, ಶ್ರೀ ಶಂಕರೇಗೌಡ ಮತ್ತು ಮೋಹನ ಕುಮಾರ್ ರವರು ಅಭಿನಯಿಸಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ಬೈಕೆರೆ ನಾಗೇಶ್, ಶ್ರೀಮತಿ ವಂದನಾ ಗುರ್‌ನಾನಿ, ಮತ್ತು ಶ್ರೀಮತಿ ಇಮ್‌ಕೊಂಗ್ಲಾ ಜಮೀರ್ ಇವರುಗಳು ಕರ್ನಾಟಕ ಭವನದ ಸಿಬ್ಬಂದಿಗಳು ಮತ್ತು ಅವರ ಕುಟುಂಬವರ್ಗದವರಿಗೆ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಆಯೋಜಿಸಿದ್ದ ಕ್ರೀಡಾ ಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆಯನ್ನು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ವೆಂಕಟೇಶ್ ಕಡಗದ ಕೈ ಹಾಗೂ ಶ್ರೀಮತಿ ಸುಮಾ ಎಸ್ ಜೋಶಿಯವರು ಮಾಡಿದರು. ವಂದನಾರ್ಪಣೆಯನ್ನು ಕರ್ನಾಟಕ ಭವನದ ಕನ್ನಡೇತರ ಸಿಬ್ಬಂದಿಯಾದ ಶ್ರೀ.ಪಿ.ಪಿ ಗೋವಿಂದನ್ ರವರಿಂದ ಮಾಡಿಸಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದ ನಂತರ ಎಲ್ಲರಿಗೂ ಕರ್ನಾಟಕ ಶೈಲಿಯ ರುಚಿಯಾದ ಭೋಜನ ವ್ಯವಸ್ಥೆಯನ್ನೂ ಸಹ ಮಾಡಲಾಗಿತ್ತು.

ಒಟ್ಟಾರೆಯಾಗಿ ನವೆಂಬರ್ ತಿಂಗಳಿನ ಆದಿಯಲ್ಲಿ ಕರ್ನಾಟಕ ಭವನದ ವತಿಯಿಂದ ನಡೆದ ಅಂದಿನ ಎಲ್ಲಾ ಸಾಂಸ್ಕೃತಿಕ ಮತ್ತು ಇತರೆ ಕಾರ್ಯಕ್ರಮಗಳು ದೆಹಲಿ ಕನ್ನಡಿಗರಿಗೆ ದೆಹಲಿಯಲ್ಲಿ ಮುಂದಿನ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳಿಗೆ ಉತ್ತಮ ಶುಭಾರಂಭವನ್ನೇ ನೀಡಿತ್ತು ಎಂದರೆ ಉತ್ಪ್ರೇಕ್ಷೆಯಾಗಲಾರದು.






**Delhi Karnataka Sangha's Abhimatha Monthly,**
**Dec -2011, Price Rs.1/-  RNI Regn. No. 53405/91, DL-SW-15/4016/10-11-12**
**Printout Date : Dec 8th / 9th, Postal Date :10th / 11th, Total Pages-24**



ದಿ. ಕೆ.ಆರ್. ನಾಗರಾಜ ಸ್ಮಾರಕ ವಿದ್ಯಾರ್ಥಿ ವೇತನ ಪಡೆದ ಮಕ್ಕಳೊಂದಿಗೆ ಮುಖ್ಯ ಅತಿಥಿಗಳು ಹಾಗು ಪದಾಧಿಕಾರಿಗಳು



ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಭ್ರಮಿಸುತ್ತಿರುವ ದೆಹಲಿ ಕನ್ನಡಿಗರು

**Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770**